ಗೋವಿಂದರಾಜ್ ಬೂದಗುಂಪಾ ಸಾರಥ್ಯದಲ್ಲಿ...

ಕನ್ನಡ ಪ್ರಾದೇಶಿಕ ಡಿಜಿಟಲ್ ವಾರಪತ್ರಿಕೆ

# GB NEWS ಕನ್ನಡ

SEARCHING OF TRUTH...............




# ಜಮೀರ್ ಒಬ್ಬ '420' ಜನಾರ್ಧನ ರೆಡ್ಡಿ ಆಕ್ರೋಶ



## ಕೊಪ್ಪಳದಲ್ಲಿ ವಾರದ ಬಡ್ಡಿ ಸಾಲ; ಮೈಕ್ರೋ ಫೈನಾನ್ಸ್‌ಗಳ ಹಾವಳಿಯಿಂದ



ಕೊಪ್ಪಳ ಗ್ರಾಮೀಣ ಭಾಗದ ಜನಜೀವನ ಅಯೋಮಯ

## ಗಾಂಧಿಯನ್ನು ನಾನೇಕೆ ಕೊಂದೆ

ಗೋಡ್ಸೆ ಬರೆದ ಪತ್ರದಲ್ಲಿ ಅಸಲಿ ಸತ್ಯ





## ಲಾರೆನ್ಸ್ ಬಿಷ್ಣೋಯಿ ಯಾರು?

ಕೆಲವರಿಗೆ ಸಿಂಹ ಸ್ವಪ್ನವೇ?

ಕೆನಡಾ ದೇಶವನ್ನೇ ನಡುಗಿಸಿದನಾ?

# ಜಮೀರ್ ಒಬ್ಬ '420'

## ಜನಾರ್ಧನ ರೆಡ್ಡಿ ಆಕ್ರೋಶ











ಕರ್ನಾಟಕದಲ್ಲಿ ಕಳೆದ ಒಂದು ತಿಂಗಳಿನಿಂದ ವಕ್ಫ್ ಜಮೀನು ಕಬಳಿಕೆಯ ಸುದ್ದಿ ವಿಪರೀತ ಹೋಡ್ತಾ ಇದೆ, ರೈತರ ಜಮೀನುಗಳು ಊರಿಗೆ ಊರುಗಳೇ ಮಠಮಾನ್ಯಗಳು ಸರ್ಕಾರಿ ಜಾಗಗಳು ಸರ್ಕಾರಿ ಶಾಲೆಗಳು ವಾಕ್ ಹೆಸರಿಗೆ ನೋಂದಣಿ ಆಗುತ್ತಿವೆ ಮತ್ತು ತನ್ನದು ಅಂತ ವಕ್ಫ್ ಘೋಷಿಸಿಕೊಳ್ಳುತ್ತಿದೆ. ಯಾವತ್ತೋ ಯಾವುದೋ ವರ್ಷದಲ್ಲಿ ಮುಸಲ್ಮಾನರು ದಾನಕೊಟ್ಟ ಜಮೀನು ಈಗ ವಾಪಸು ಕೇಳಿದರೆ ಈ ತಕರಾರು ಯಾಕೆ? ಅನ್ನುವ ವಾದ ಒಂದು ಕಡೆ ಆದ್ರೆ ವಕ್ಫ್ ಕಾನೂನಿಗೆ ತರಲಾದ ತಿದ್ದುಪಡಿ ಅಪ-ರಿಮಿತ ಅಧಿಕಾರವನ್ನು ಕೊಡುತ್ತಿದೆ, ಆ ಕಾರಣಕ್ಕೆ ಇದೆಲ್ಲ ಆಗುತ್ತಿದೆ ಅನ್ನುವುದು ಇನ್ನೊಂದು ಕಡೆಯ ವಾದ, ಬಿಜೆಪಿಯವರು ಅದರ ವಿರುದ್ಧ ಪ್ರತಿಭಟನೆ ಮಾಡುತ್ತಿದ್ದಾರೆ ಅದಕ್ಕಂತಾನೆ ಕೇಂದ್ರ ಸರ್ಕಾರ ಜೆಪಿಸಿ ರಚನೆ ಮಾಡಿ ಯಾವ ಯಾವ ರೈತರಿಗೆ ಎಲ್ಲಿ ಎಲ್ಲಿ ಅನ್ಯಾಯ ವಕ್ಫ್ ಮಂಡಳಿಯಿಂದ ಆಗಿದೆಯೋ ಅಲ್ಲಿಗೆ ಭೇಟಿಕೊಟ್ಟು ವಿಚಾರಿಸುವ ಕೆಲಸ ಮಾಡುತ್ತಿದೆ.ಇತ್ತ ಬಿಜೆಪಿ ಇದನ್ನೇ ರಾಜಕೀಯ ದಾಳವನ್ನಾಗಿ ಮಾಡಿಕೊಂಡು ರಾಜ್ಯಾದ್ಯಂತ ಹೋರಾಟಗಳನ್ನು ರೂಪಿಸುತ್ತಿದೆ, ಅದೇ ರೀತಿ ಕೊಪ್ಪಳದಲ್ಲಿ ಜಿಲ್ಲಾ ಬಿಜೆಪಿ ಜಿಲ್ಲಾ ಅಧಿಕಾರಿಗಳ ಕಚೇರಿಯ ಮುಂದೆ ಪ್ರತಿಭಟನೆ ಹಮ್ಮಿಕೊಂಡಿತ್ತು. ಪ್ರತಿಭಟನೆಯಲ್ಲಿ ನಮ್ಮ ಹಕ್ಕು ನಮ್ಮ ಭೂಮಿ ಬ್ಯಾನರ್ ನ ಅಡಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಬಿಜೆಪಿ ನಾಯಕರಾದ ಜನಾರ್ಧನ ರೆಡ್ಡಿ ಬಸವರಾಜ ಕ್ಯಾವೆಟರ್ ಬಿಜೆಪಿ ಜಿಲ್ಲಾಧ್ಯಕ್ಷ ನವೀನ್ ಕುಮಾರ್ ಗುಳಗಣ್ಣನವರ್ ಬಿಜೆಪಿ ಎಸ್ಸಿ ಮೋರ್ಚಾ ಅಧ್ಯಕ್ಷ ಗಣೇಶ ಜಿಲ್ಲಾ ಬಿಜೆಪಿ ರೈತ ಮೋರ್ಚದ ಅಧ್ಯಕ್ಷ ಅಶೋಕ್ ತಾವರಗೇರಿ ನೂರಾರು ಕಾರ್ಯಕರ್ತರೊಂದಿಗೆ ಪ್ರತಿಭಟನೆ ನಡೆಸಿದರು, ಈ ಸಂದರ್ಭದಲ್ಲಿ ಮಾತನಾಡಿದ ಗಂಗಾವತಿ ಶಾಸಕ ಮತ್ತು ಮಾಜಿ ಸಚಿವ ಜನಾರ್ಧನ ರೆಡ್ಡಿ ಅವರು ರಾಜ್ಯ ಸರ್ಕಾರ ಮತ್ತು ಜಮೀರ್ ಅಹ್ಮದ್ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಹಿಗ್ಗ ಮುಗ್ಗ ಟೀಕಿಸಿದರು.

"ಏಕವಚನದಲ್ಲಿಯೇ ಜಮೀರ್ ಅಹ್ಮದ್ ಅವರನ್ನು ಟೀಕಿಸಿದ ಜನಾರ್ದನ ರೆಡ್ಡಿ ಅವರು ಜಮೀರ್ ಒಬ್ಬ 420, ಸಿದ್ದರಾಮಯ್ಯ ನವರಿಗೆ ವಿನಾಶಕಾಲೇ ವಿಪರೀತ ಬುದ್ಧಿ ಅನ್ನುವಂತೆ ಆಗಿದೆ ಸಿದ್ದರಾಮಯ್ಯ ಶೋಷಿತರ ಬಡವರ ಪರ ಮುಖ್ಯಮಂತ್ರಿ ಅಂತ ಹೇಳಿ ಅಧಿಕಾರಕ್ಕೆ ಬಂದು ಇವತ್ತು ಶೋಷಿತರ ಬಡವರ ಭೂಮಿಯನ್ನ ಕಬಳಿಸುವ ಹುನ್ನಾರಕ್ಕೆ ಕೈ ಹಾಕಿದ್ದಾರೆ, ನೋಟಿಫಿಕೇಶನ್ ಕ್ಯಾನ್ಸಲ್ ಮಾಡ್ತೀವಿ ಯಥಾರೀತಿ ರೈತರ ಆಸ್ತಿಗೆ ವಕ್ಫ್ ಬೋರ್ಡ್ ನಮೂದಾಗಿದ್ದರೆ ಅದನ್ನು ಸರಿಪಡಿಸುತ್ತೇವೆ ಅಂತ ಹೇಳುತ್ತಾರೆ, ಆದರೆ ಈಗಲೂ ಕೂಡ ರೈತರ ಪಹಣಿಗಳಲ್ಲಿ ವಕ್ಫ್ ಹೆಸರು ಬರುತ್ತವೆ ಇದು ಯಾವ ರೀತಿಯ ದರೋಡೆ ಅನ್ನುವುದೇ ಅರ್ಥವಾಗುತ್ತಿಲ್ಲ ಎಂದರು ಕಾಂಗ್ರೆಸ್ ಸರ್ಕಾರ ಬಡವರ ಆಸ್ತಿಯನ್ನು ಕಬಳಿಸುತ್ತಿದೆ, ಕಾಂಗ್ರೆಸ್ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವ ಮುನ್ಸೂಚನೆ ನೀಡುತ್ತಿದೆ, ಸಾಕಷ್ಟು ಹಗರಣಗಳಲ್ಲಿ ಮುಳುಗಿಹೋಗಿದೆ ಇನ್ನು ಕಾಂಗ್ರೆಸ್ ಇತಿಹಾಸ ಸೇರುತ್ತದೆ" ಎಂದು ಗುಡುಗಿದರು.

**ಜಿಲ್ಲಾ ಅಧಿಕಾರಿಗಳೇ ಡೀಸಿ ಆಫೀಸಿಗೆ ಬೀಗ ಹಾಕಿ ನಿಮ್ಮನ್ನು ಒಳಗಡೆ ಹಾಕುತ್ತೇವೆ ಎಚ್ಚರ:** ರೈತರ ಜಮೀನು ಯಾರ ಅಪ್ಪ ಅಮ್ಮನ ಆಸ್ತಿಯಲ್ಲ ಕೊಪ್ಪಳ ಜಿಲ್ಲೆಯಲ್ಲಿ ರೈತರ ಜಮೀನುಗಳಲ್ಲಿ ವಕ್ಫ್ ಹೆಸರು ಸೇರ್ಪಡೆಯಾಗ್ತಿದೆ, ಅವುಗಳನ್ನ ಕೂಡಲೇ ಸರಿಪಡಿಸಬೇಕು ನಳಿನ್ ಕುಮಾರ್ ಅತುಲ್ ಸಾಹೇಬರೇ ಕೂಡಲೇ ಅವುಗಳನ್ನ ಸರಿಪಡಿಸದಿದ್ದರೆ ಡಿಸಿ ಆಫೀಸಿಗೆ ಬೀಗ ಹಾಕಿ ನಿಮ್ಮನ್ನು ಒಳಗಡೆ ಕೂಡಿ ಹಾಕುತ್ತೇವೆ ಎಂದು ಜಿಲ್ಲಾ ಅಧಿಕಾರಿಗೆ ಎಚ್ಚರಿಕೆ ನೀಡಿದರು ತಿಪ್ಪೇರುದ್ರಸ್ವಾಮಿಯವರು ಮೋಟೇಶನ್ ಬದಲಾವಣೆ ಆಗುವವರೆಗೂ ನಿಮ್ಮನ್ನು ಬಿಡುವುದಿಲ್ಲ ಎಂದು ಗುಡುಗಿದರು.

ಸುಮಾರು 70 ವರ್ಷಗಳಿಂದ ಕಬ್ಜಾ ಇದ್ದು ನಾವು ಉಳಿಮೆ ಮಾಡುತ್ತಿದ್ದರು ನಮ್ಮ ಆಸ್ತಿಗಳು ವಕ್ಫ್ ಗೆ ಸೇರ್ಪಡೆ ಆಗುತ್ತಿವೆ. ನಿಮಗೆ ಹೇಗೆ ಸೇರ್ಪಡೆ ಆಯ್ತು ಅಂತ ವಕ್ಫ್ ಗೆ ದಾಖಲೆ ತೋರಿಸಿ ಅಂದ್ರೆ ಅವರು ತೋರಿಸುವದಿಲ್ಲವಂತೆ ಅದು ಅವರ ಕಾನೂನು ಇರುವುದೇ ಆಗೆ ಅಂತೆ ಆದರೆ ನಾವು ನಮ್ಮ ಜಮೀನನ್ನು ಕಳೆದುಕೊಂಡು ನಾವು ದಾಖಲೆ ತೋರಿಸಬೇಕು ಅಂದರೆ ನಮ್ಮ ದೇಶದಲ್ಲಿ ಎರಡು ಸಂವಿಧಾನ ಇವೆಯೇ ಅನ್ನುವ ಅನುಮಾನ ಮೂಡುತ್ತಿದೆ ಎಂದು ತಿಪ್ಪೆರುದ್ರ ಸ್ವಾಮಿಯವರು ಆಕ್ರೋಶ ಹೊರ ಹಾಕಿದರು.

ಒಟ್ಟಾರೆಯಾಗಿ ರಾಜ್ಯಾದ್ಯಂತ ಈ ಗೊಂದಲದ ವಿರುದ್ಧ ಸಾಕಷ್ಟು ಪ್ರತಿಭಟನೆಗಳು ವಿರೋಧಗಳು ನಡೆಯುತ್ತಿವೆ, ರಾಜ್ಯ ಸರ್ಕಾರ ಒಂದಿಲ್ಲೊಂದು ಸಮಸ್ಯೆಯ ಸುಳಿಯಲ್ಲಿ ಸಿಲುಕಿ ಕೊಳ್ಳುತ್ತಲೇ ಇದೆ, ಒಂದು ಸಮಸ್ಯೆ ಇತ್ಯರ್ಥ ಆಯ್ತು ಅನ್ನುವಷ್ಟರಲ್ಲಿ ಮತ್ತೊಂದು ಸಮಸ್ಯೆಯನ್ನು ಸ್ವತಃ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ತನ್ನ ಮೈ ಮೇಲೆ ಹೇಳಿದುಕೊಳ್ಳುತ್ತಿದೆ. ಇದನ್ನೆಲ್ಲಾ ಗಮನಿಸಿದರೆ ಐದು ಗ್ಯಾರಂಟಿಗಳು ಇವರನ್ನು ಇವರ ಭೌತಿಕತೆಯನ್ನು ದಿವಾಳಿ ಮಾಡಿವೆ ಅನ್ನೋದು ಎದ್ದು ಕಾಣುತ್ತದೆ ಅನ್ನುತ್ತಾರೆ ಪ್ರಜ್ಞಾವಂತ ನಾಗರಿಕರು.

**-ಸಂಪೂರ್ಣ ವರದಿ: ಗೋವಿಂದರಾಜ್ ಬೂದಗುಂಪ**

## ಸಿದ್ದರಾಮಯ್ಯ ನಿನಗೆ ಫ್ರೀ ಕೊಡು ಅಂತ ಯಾರು ಕೇಳಿದರು; ಶರಣೆಗೌಡ ಕೆಸರಟ್ಟಿ

ಈ ಪ್ರತಿಭಟನೆಯಲ್ಲಿ ರಾಜ್ಯ ಅನ್ನದಾತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಶರಣೆಗೌಡ ಕೆಸರಟ್ಟಿ ಅವರು ಭಾಗವಹಿಸಿದ್ದರು, ಮತ್ತು ಬಿಜೆಪಿಯ ಪ್ರತಿಭಟನೆಗೆ ಸಂಪೂರ್ಣ ಬೆಂಬಲ ನೀಡಿದ್ದರು. ನಂತರ ರೈತರಿಗೆ ಗೊಂದಲ ಮೂಡಿಸುತ್ತಿರುವ ಸರ್ಕಾರದ ವಿರುದ್ಧ ಹಿಗ್ಗಾಮುಗ್ಗ ಜಾಡಿಸಿದ ಶರಣೆಗೌಡ ಅವರು ಸಿದ್ದರಾಮಯ್ಯನವರನ್ನು ತರಾಟೆಗೆ ತೆಗೆದುಕೊಂಡರು ಸಿದ್ದರಾಮಯ್ಯನವರೇ ನಾವು ನಿಮಗೆ ಪ್ರೀ ಕೊಡು ಅಂತ ಕೇಳಿಲ್ಲ ರೀ ಕೊಟ್ಟು ನೀವು ಅಧಿಕಾರ ಅನುಭವಿಸುತ್ತಿದ್ದೀರಿ ಈಗ ಕೊಡಲಾಗದೆ ಬಿಪಿಎಲ್ ಕಾರ್ಡ್ಗಳನ್ನು ರದ್ದು ಮಾಡುತ್ತಿದ್ದೀರಿ ಮತ್ತು ರೈತರ ಜಮೀನುಗಳನ್ನು ಕಬಳಿಸುತ್ತಿದ್ದೀರಿ ಈ ರೀತಿ ಬೇಕಾಬಿಟ್ಟಿ ಫ್ರೀ ಕೊಡುವ ಬದಲಾಗಿ ರೈತರು ಬೆಳೆದ ಬೆಳೆಗೆ ಉತ್ತಮವಾದ ಬೆಲೆ ನೀಡಿದ್ದರೆ ಸರಕಾರಕ್ಕೆ ನಾವೇ ಸಾಲ ಕೊಡುತ್ತಿದ್ದೆವು ನಿಮ್ಮ ಅಧಿಕಾರದ ಆಸೆಗೆ ಇವತ್ತು ಬಡವರು ಮಠಮಾನ್ಯಗಳ ಭಕ್ತರು ಮಠಾಧೀಶರು ಚಿಕ್ಕ ಮಕ್ಕಳು ವಿದ್ಯಾರ್ಥಿಗಳು ಬೀದಿಗೆ ಬರುವಂತಾಗಿದೆ ಇದು ನಾಚಿಕೆಗೇಡಿನ ಕೆಲಸ ಎಂದ ರೈತನಾಯಕ ಶರಣೆಗೌಡ ಅವರು "ಇವತ್ತು ಡೀಜೆ ಹಳ್ಳಿ ಗಲಭೆ ಕೋರ ಕಿಡಿಗೇಡಿಗಳ ಪ್ರಕರಣ ರದ್ದು ಮಾಡುತ್ತೀರಿ, ಆದರೆ ರೈತ ಪರವಾಗಿ ಹೋರಾಟ ಮಾಡಿದ ಹೋರಾಟಗಾರರ ಪ್ರಕರಣಗಳನ್ನು ಹಾಗೆ ಬಿಡುತ್ತೀರಿ ಇದು ಜನಪರ ಸರ್ಕಾರ ಅಲ್ಲ ಬದಲಾಗಿ ಒಂದು ಜಾತಿ ಧರ್ಮವನ್ನು ಎತ್ತಿ ಹಿಡಿಯುವ ಸರ್ಕಾರ" ಎಂದು ಟೀಕಿಸಿದರು,

"ಶಾಸಕರ ಮನೆಗೆ ಬೆಂಕಿ ಹಚ್ಚುವವರು, ಮತ್ತು ಪೊಲೀಸ್ ಸ್ಟೇಷನ್ ಗಳಿಗೆ ಬೆಂಕಿ ಹಚ್ಚುವವರು, ಪೊಲೀಸರಿಗೆ ಕಲ್ಲು ಹೊಗೆಯುವವರು ನಿಮಗೆ ಅಮಾಯಕರು. ಆದರೆ ಹೋರಾಟ ಮಾಡುವ ರೈತರು ನಿಮ್ಮ ಕಣ್ಣಿಗೆ ಕ್ರಿಮಿನಲ್ ಗಳು ನಿಮಗೇನಾದರೂ ನಾಚಿಕೆ ಮಾನ ಮರ್ಯಾದೆ ಇದೆಯಾ ಎಂದು ಶರಣಗೌಡ ತೀವ್ರವಾಗಿ ರಾಜ್ಯ ಸರ್ಕಾರದ ನೀತಿಯನ್ನು ಖಂಡಿಸಿದರು.

### ಏನಪ್ಪಾ ತಂಗಡಗಿ ನೀನ್ ಯಾವ ರೀತಿ ರೈತಪರ

**ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಅನ್ನದಾತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಶರಣಪ್ಪ ಕೆಸರಟ್ಟಿ ಅವರು ಜಿಲ್ಲಾ ಉಸ್ತುವಾರಿ ಮಂತ್ರಿ ಶಿವರಾಜ್ ತಂಗಡಿ ಅವರನ್ನು ತರಾಟೆಗೆ ತೆಗೆದುಕೊಂಡರು ಇತ್ತೀಚಿಗೆ ಶಿವರಾಜ್ ತಂಗಡಿಗೆ ಅವರು ನಾನು ರೈತರ ಪರವಾಗಿದ್ದೇನೆ ರೈತರನ್ನು ಕಾಪಾಡುತ್ತೇನೆ ಅಂತ ಹೇಳುತ್ತಾರೆ ಆದರೆ ಮೊನ್ನೆ ತುಂಗಭದ್ರ ಅಣೆಕಟ್ಟಿನ ಕ್ರಷರ್ ಗೇಟ್ ಮುರಿದಾಗ ಆಗಲು ರಾತ್ರಿ ನಿದ್ದೆ ಮಾಡದೆ ಕೆಲಸ ಮಾಡಿದ್ದೇನೆ ಎಂದು ಕೊಚ್ಚಿಕೊಳ್ಳುತ್ತಾರೆ ಅಲ್ಲಪ್ಪ ತಂಗಡಗಿ ನೀನ್ ಅಷ್ಟೇ ಅಲ್ಲ ಎಲ್ಲಾ ಪಕ್ಷದ ಪ್ರತಿನಿಧಿಗಳು ಮತ್ತು ಕೆಲಸಗಾರರು ಶ್ರಮವಹಿಸಿ ಆ ಕಾರ್ಯ ಮಾಡಿದ್ದಾರೆ ಯಶಸ್ವಿಯಾದ ತಕ್ಷಣ ನಾನೇ ಮಾಡಿಬಿಟ್ಟೆ ಅನ್ನುವ ರೀತಿಯಲ್ಲಿ ಔತಣಕೂಟದಂತ ಸಮಾರಂಭ ಮಾಡುವುದು ಎಷ್ಟು ಸರಿ ನಾವು ರೈತರು ಕಣ್ಣೀರು ಹಾಕಿದ್ದೇವೆ ಆದರೆ ಜಿಲ್ಲಾ ಉಸ್ತುವಾರಿ ಮಂತ್ರಿ ಆದ ನೀವು ಕೂಟಗಳನ್ನು ಮಾಡಿ ಸಂತೋಷದಿಂದ ಊಟ ಮಾಡುತ್ತೀರಿ ರೈತರನ್ನು ಹೀಗೆ ಕಡೆಗಣಿಸಿದರೆ ಮುಂದೆ ಉಣ್ಣುವುದಕ್ಕೆ ಅನ್ನ ಸಿಗುವುದಿಲ್ಲ ಇದು ನಿಮಗೆ ಎಚ್ಚ-ರಿಕೆ ನೀಡುತ್ತಿದ್ದೇನೆ ಎಂದು ತಂಗಡಗಿ ಅವರನ್ನು ತೀವ್ರವಾಗಿ ಟೀಕಿಸಿದರು.**



**ಜಮೀರ್ ನಾವು ಬೆಳೆದ ಅನ್ನ ನೀನು ತಿನ್ನುವುದು ನೆನಪಿರಲಿ:** "ಇದು ಯಾರಪ್ಪನ ಭೂಮಿ ಅಲ್ಲ ಜಮೀರ್ ಅಣ್ಣ ಇದು ರೈತರ ಭೂಮಿ, ರೈತರು ಬೆಳೆದರೆ ಮಾತ್ರ ನೀನು ಅನ್ನ ತಿನ್ನಬೇಕು ಇಲ್ಲದಿದ್ದರೆ ಮಣ್ಣು ಕೂಡ ನಿನ್ನಿಂದ ತಿನ್ನಲು ಆಗುವುದಿಲ್ಲ, ಒಂದು ವೇಳೆ ನಾನು ಅನ್ನ ತಿನ್ನುವುದಿಲ್ಲ ಮಾಂಸ ತಿನ್ನುತ್ತೇನೆ ಅಂದರೆ ಆ ಮಾಂಸಕ್ಕೆ ಹಾಕುವ ಮಸಾಲೆ ಕೂಡ ರೈತರೇ ಬೆಳೆಯಬೇಕು, ಇದು ನಿನಗೆ ಗೊತ್ತಿದ್ದರೆ ಈ ರೀತಿ ರೈತರ ಭೂಮಿ ಕಬಳಿಕೆ ಮಾಡುತ್ತಿರಲಿಲ್ಲ ಕೂಡಲೇ ಇದನ್ನ ಸರಿಪಡಿಸಿದಿದ್ದರೆ ತಕ್ಕ ಶಾಸ್ತಿ ನಿನಗೆ ಆಗುತ್ತವೆ" ಎಂದು ಶರಣೇಗೌಡ ಕೆಸರಟ್ಟಿ ಅವರು ಜಮೀರ್ ಅಹ್ಮದ್‌ಗೆ ಎಚ್ಚರಿಕೆ ನೀಡಿದರು.

**25 ಲಕ್ಷ ಬಡವರ ಹಸಿರು ಕಾರ್ಡ್ ರದ್ದು ಮಾಡಿ ಬಡವರ ಮೇಲೆ ಬಂಡೆ ಎಳೆದ ಸಿದ್ದರಾಮಯ್ಯ ನೀ ಹೇಗೆ ಬಡವರ ಪರ:** ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಹಿರಿಯ ಬಿಜೆಪಿ ನಾಯಕ ಮತ್ತು ರೈತ ಹೋರಾಟಗಾರ ತಿಪ್ಪೇರುದ್ರಸ್ವಾಮಿಯವರು ರಾಜ್ಯ ಸರ್ಕಾರ ಮತ್ತು ಸಿದ್ದರಾಮಯ್ಯನವರ ವಿರುದ್ಧ ಸಾಕಷ್ಟು ಆರೋಪಗಳನ್ನ ಮಾಡಿದರು. ಎಸ್ ಸಿ, ಎಸ್ ಟಿ, ವಾಲ್ಮೀಕಿ ನಿಗಮ, ಹಿಂದುಳಿದ ವರ್ಗಗಳ ಎಲ್ಲಾ ಸಮುದಾಯದ ಅಭಿವೃದ್ಧಿ ಹಣವನ್ನು ಕೊಟ್ಟು ಹಿಂದಕ್ಕೆ ಪಡೆದಿದ್ದೀರಿ, ಯಾರೋ ದುರುಪಯೋಗಪಡಿಸಿಕೊಂಡರು ಅಂತ ಸಬೂಬು ಹೇಳಿ ಬಡವರ 25 ಲಕ್ಷ ಬಿಪಿಎಲ್ ಕಾರ್ಡ್ ರದ್ದು ಮಾಡಿದ್ದೀರಿ, ಹೇಳಿಕೊಳ್ಳುವುದಕ್ಕೆ ನಾನು ಬಡವರ ಪರ ಮುಖ್ಯಮಂತ್ರಿ ಅಂತ ಹೇಳುತ್ತೀರಿ ಬಡವರ ಪರ ಮುಖ್ಯಮಂತ್ರಿ ಅನ್ನುವುದಕ್ಕೆ ನಿಮಗೆ ನೈತಿಕತೆ ಇಲ್ಲ, ಅನ್ನ ರಾಮಯ್ಯ ಅನ್ನಿಸಿಕೊಂಡು ಬಡವರ ಆನ್ನ ಕಿತ್ತುಕೊಂಡಿರುವ ಈ ಸರ್ಕಾರವನ್ನು ಬಡವರ ಪರ ಅನ್ನುವುದಕ್ಕೆ ಸಾಧ್ಯವೇ ಎಂದು ಆಕ್ರೋಶ ಹೊರಹಾಕಿದರು.

## ಸಂಪಾದಕೀಯ



ಜಿ ಬಿ ನ್ಯೂಸ್ ಕನ್ನಡ
ಸಂಪಾದಕರು:
ಗೋವಿಂದರಾಜ್ ಬೂದಗುಂಪಾ

# ಅಮೆರಿಕದಲ್ಲಿ ಟ್ರಂಪ್ ಗೆಲುವು; ದೀರ್ಘಕಾಲದ ಅಜ್ಞಾತವಾಸದತ್ತ ಜಾಗತಿಕ ಬುದ್ಧಿಜೀವಿಗಳು



ಅಮೆರಿಕ ರಾಜಕಾರಣದ ವಿಚಾರ ಬಂದಾಗಲೆಲ್ಲ ಪದಪುಂಜವೊಂದು ಪ್ರಸ್ತಾಪವಾಗುವುದನ್ನು ಕೇಳಿರುತ್ತೀರಿ. ಅದೆಂದರೆ, 'ಡೀಪ್ ಸ್ಟೇಟ್'. ಈ ಡೀಪ್ ಸ್ಟೇಟ್ ಅಂದರೆ ಯಾರ್ಯಾರು ಎಂದೆಲ್ಲ ಖಚಿತ ಉತ್ತರವೇನೂ ಇಲ್ಲವಾದರೂ, ಬಹುವರ್ಷಗಳಿಂದ ಅಧಿಕಾರದ ಪಡಸಾಲೆಯೊಂದಿಗೆ ಸಂಪರ್ಕ ಹೊಂದಿರುವ ಉದ್ದಿಮೆದಾರರು, ನಿವೃತ್ತ ಅಧಿಕಾರಿಗಳು, ರಕ್ಷಣೆ ಮತ್ತು ರಾಜತಾಂತ್ರಿಕ ವಲಯಗಳಲ್ಲಿ ತೊಡಗಿಸಿಕೊಂಡವರು ಇತ್ಯಾದಿ ವ್ಯಕ್ತಿಗಳ ತೆರೆಮರೆಯ ಗುಂಪು ಇದು. ಅಧ್ಯಕ್ಷರಾಗಿ ಯಾರೇ ಬದಲಾವಣೆ ಹೊಂದಿದರೂ ಕೊನೆಗೂ ಸರ್ಕಾರಗಳ ನೀತಿ ಅನುಷ್ಠಾನವಾಗುವುದು ಅಧಿಕಾರಿಗಳ ವಲಯದಿಂದಲೇ. ಇಂಥ ಅಧಿಕಾರಿ ವಲಯವನ್ನು ಈ ಗುಂಪು ತನ್ನ ಅಧೀನದಲ್ಲಿಟ್ಟುಕೊಂಡಿದೆಯಾದ್ದರಿಂದ ಇದನ್ನು ಡೀಪ್ ಸ್ಟೇಟ್ ಅರ್ಥಾತ್ ಅಧಿಕಾರದಲ್ಲಿ ಬೇರುಬಿಟ್ಟಿರುವ ವ್ಯವಸ್ಥೆ ಅಂತ ಕರೆಯಲಾಗುತ್ತದೆ. ಭಾರತದ ರಾಜಕಾರಣದ ವಿಚಾರ ಬಂದಾಗಲೂ ಇತ್ತೀಚಿನ ದಿನಗಳಲ್ಲಿ ಪ್ರಖ್ಯಾತವಾಗಿರುವ ಸಿನಿಮಾ ಡೈಲಾಗ್ ಒಂದಿದೆ – "ಸರ್ಕಾರ ಅವರದ್ದಾದರೇನಂತೆ, ಸಿಸ್ಟಂ ನಮ್ಮದೇ ಅಲ್ಲವೇ" ಅಂತ. ಲಾಗಾಯ್ತಿನಿಂದ ಭಾರತದ ಅಕಾಡೆಮಿಕ್ ವಲಯದಲ್ಲಿ, ಉದ್ಯಮ ಸ್ತರಗಳಲ್ಲಿ, ಮಾಧ್ಯಮ ಮತ್ತು ಚಿಂತನಕೂಟಗಳಲ್ಲಿ, ಅಧಿಕಾರಿವರ್ಗದಲ್ಲಿ ತಮ್ಮನ್ನು ಪ್ರತಿಷ್ಠಾಪಿಸಿಕೊಂಡಿರುವ ಜನರ ಗುಂಪೊಂದಿದೆ. ಕೇಂದ್ರದಲ್ಲಿ ಆಡಳಿತವನ್ನು ಬಿಜೆಪಿಯೇ ನಡೆಸಿದರೂ, ಕಾಂಗ್ರೆಸ್ಸೇ ನಡೆಸಿದರೂ ಕಾರ್ಯಾನುಷ್ಠಾನ ಹಂತದಲ್ಲಿ ಹಾಗೂ ಕಥಾನಕಗಳನ್ನು ಹೆಣೆಯುವಲ್ಲಿ ಇವರದ್ದೇ ಪ್ರಭಾವ ನಡೆಯುತ್ತದೆ ಎಂಬ ಗ್ರಹಿಕೆ ಇಲ್ಲಿನ ಆಡಳಿತ ವ್ಯವಸ್ಥೆಯಲ್ಲೂ ಇದೆ. ಹೀಗಾಗಿಯೇ ಭಾರತದಲ್ಲೇ ಆಗಲೀ, ಅಮೆರಿಕದಲ್ಲೇ ಆಗಲೀ ಬಲಪಂಥೀಯ ರಾಜಕಾರಣವು ಜಯ ಗಳಿಸಿದೆ ಎಂದಾಕ್ಷಣ ಈ ಮೊದಲಿದ್ದ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆ ಬಂದುಬಿಡುತ್ತದೆ ಎಂದೇನಲ್ಲ ಎಂದು ವಿಶ್ಲೇಷಕರು ವಾದಿಸುತ್ತಾರೆ. ಏಕೆಂದರೆ, ಅಧಿಕಾರದ ಶೀರ್ಷಭಾಗದಲ್ಲಿ ಯಾರೇ ಕುಳಿತರೂ 'ಸಿಸ್ಟಂ' ಇಲ್ಲವೇ 'ಡೀಪ್ ಸ್ಟೇಟ್' ಬದಲಾಗುವುದಕ್ಕೆ ತುಸು ದೀರ್ಘ ಸಮಯವೇ ಹಿಡಿಯುತ್ತದೆ. ಈ ನಡುವೆ ಹಳೆಯ ವಿಚಾರಗಳ ಪ್ರತಿಪಾದಕರಿಗೇ ನಡುವಿನಲ್ಲಿ ಮತ್ತೆ ಅಧಿಕಾರ ಸಿಕ್ಕಿದ್ದೇ ಆದರೆ ಹೊಸ ವಿಚಾರವು ಬೇರು ಹರಡಿಕೊಳ್ಳುವ ಮೊದಲೇ ಮುರುಟುತ್ತದೆ. ಈ ಹಿನ್ನೆಲೆಯಲ್ಲಿ, ಇತ್ತೀಚಿನ ಅಮೆರಿಕದ ಚುನಾವಣೆಯಲ್ಲಿ ಡೊನಾಲ್ಡ್ ಟ್ರಂಪ್ ವಿಜಯವು ಅಲ್ಲಿನ 'ಡೀಪ್ ಸ್ಟೇಟ್' ಮೇಲೆ ಯಾವ ಪರಿಣಾಮ ಬೀರಬಲ್ಲದು ಎಂಬುದು ಈಗ ಚರ್ಚೆಯ ವಿಷಯ. ಭಾರತದ 'ಸಿಸ್ಟಂ' ಮೇಲೆ ಸಹ ಎಷ್ಟರಮಟ್ಟಿಗೆ ಟ್ರಂಪ್ ವಿಜಯ ಪ್ರಭಾವಿಸುತ್ತದೆ ಎಂಬುದು ಸಹ ಇದರ ಮುಂದುವರಿದ ಚರ್ಚಾಭಾಗವಾಗುತ್ತದೆ.

### ಅಮೆರಿಕದಲ್ಲಾಗಿರುವುದು ಒಂದು ಅವಧಿಯ ಅಧಿಕಾರ ಬದಲಾವಣೆ ಅಲ್ಲ!:

2016ರಲ್ಲಿ ಟ್ರಂಪ್ ರಾಜಕೀಯ ವ್ಯವಸ್ಥೆಗೆ ಹೊರಗಿನವರಾಗಿ ಅಧಿಕಾರ ಸೂತ್ರ ಹಿಡಿದರು. 2020ರಲ್ಲಿ ಚುನಾವಣೆ ಸೋತ ನಂತರ ಅವರ ವಿರುದ್ಧ ಆರೋಪಗಳಾಗಿ ಪದಚ್ಯುತಿಯೂ ಆಯಿತು. 2024ರವರೆಗೆ ಡೆಮಾಕ್ರಾಟರು ಆಳಿದ್ದ ದೇಶವನ್ನು ಈಗ ಮತ್ತೊಮ್ಮೆ ರಿಪಬ್ಲಿಕನ್ನರು ಆಳಲಿದ್ದಾರೆ, ಅದನ್ನು ಅಷ್ಟೆಲ್ಲ ಚರ್ಚಿಸುವ ಅಗತ್ಯವೇನಿದೆ ಎಂದು ಕೆಲವರಿಗೆ ಅನ್ನಿಸಬಹುದು.

ಆದರೆ ಈಗೊಂದು ದಶಕದಲ್ಲಿ ಅಮೆರಿಕದ ಎಡಪಂಥವು ನಾಗರಿಕತೆಗೇ ಸವಾಲನ್ನೊಡ್ಡಿತ್ತು. ಇನ್ನೂ ಪ್ರಾಪ್ತ ವಯಸ್ಸಿಗೆ ಬಂದಿರದ ಮಗು ಸಹ ತನ್ನ ಜೈವಿಕ ಸ್ಥಿತಿಗೆ ಹೊರತಾಗಿ ತನ್ನನ್ನು ಭಾವನೆಗಳ ಆಧಾರದ ಮೇಲೆ ಗಂಡು ಇಲ್ಲವೇ ಹೆಣ್ಣು ಎಂದು ಗುರುತಿಸಿಕೊಳ್ಳಬಹುದು; ಮಕ್ಕಳಿಗೆ ತಾವಿರುವ ಸ್ಥಿತಿ ಸರಿಯಿಲ್ಲ ಎನಿಸಿದರೆ ಶಸ್ತ್ರ ಚಿಕಿತ್ಸೆ ಮೂಲಕ ಲಿಂಗ ಪರಿವರ್ತನೆ ಮಾಡಿಕೊಳ್ಳಬಹುದು; ಅಮೆರಿಕಕ್ಕೆ ಅಕ್ಕಪಕ್ಕದ ದೇಶಗಳಿಂದ ವಲಸೆ ಬರುವುದಕ್ಕೆ ಔದಾರ್ಯ ತೋರುವುದು; ಭಾರತೀಯರು ಅಥವಾ ಇನ್ಯಾರನ್ನೇ ಅಮೆರಿಕದ ಉದ್ದಿಮೆಗಳು ಕೇವಲ ಪ್ರತಿಭೆ ಆಧರಿಸಿ ಉದ್ಯೋಗಕ್ಕೆ ಸೇರಿಸಿಕೊಳ್ಳದೇ, ಜನಾಂಗೀಯ ಪ್ರಾತಿನಿಧ್ಯ ಕೊಡುವುದು ಇಂಥದೇ ಹಲವು ನೀತಿಗಳನ್ನು ಅದು ಪ್ರತಿಪಾದಿಸಿಕೊಂಡಿತ್ತು. ಡೆಮಾಕ್ರಾಟರ ನಡಾವಳಿಗಳು ಇದಕ್ಕೆ ಪೂರಕವಾಗಿದ್ದವು. ಅಕ್ರಮ ವಲಸೆಯತ್ತ ಬೈಡೆನ್ ಆಡಳಿತ ಕುರುಡಾಗಿತ್ತು. ಟ್ರಂಪ್ ನೇತೃತ್ವದ ರಿಪಬ್ಲಿಕನ್ ಪಾಳೆಯವು ಈ ಅರಾಜಕ ಎಡಪಂಥೀಯ ನಿಲವುಗಳಿಗೆ ವಿರುದ್ಧವಾಗಿದ್ದುಕೊಂಡು ಚುನಾವಣೆ ಜಯಿಸಿತು ಎಂಬುದು ಈ ಗೆಲುವಿನಲ್ಲಿರುವ ವಿಶಿಷ್ಟ ಅಂಶ. ಸಿಐಎ–ಎಫ್ಬಿಐ ಸೇರಿದಂತೆ ಕಾರ್ಯತಂತ್ರದ ಜಾಗಗಳಲ್ಲಿ ಅಗತ್ಯಕ್ಕಿಂತ ಹೆಚ್ಚು ಮಂದಿಯನ್ನು ನುಗ್ಗಿಸಿರುವ ಎಡಪಂಥ ನೀತಿ ಕೊನೆಗಾಣಿಸಿ ಅಲ್ಲೆಲ್ಲ ಅಗತ್ಯವಿಲ್ಲದವರನ್ನು ಮನೆಗೆ ಕಳುಹಿಸುವೆ ಎಂದಿದ್ದಾರೆ ಟ್ರಂಪ್. ಅಮೆರಿಕದ ವಿಶ್ವವಿದ್ಯಾಲಯಗಳಲ್ಲಿದ್ದುಕೊಂಡು ಪ್ಯಾಲಸ್ತೀನ್ ಪರ ಘೋಷಣೆ ಕೂಗುವವರಿಗೂ ಇದೇ ದಾರಿ ತೋರಿಸುವುದಾಗಿ ಟ್ರಂಪ್ ಹೇಳಿದ್ದಾರೆ. ಈ ಎಲ್ಲ ಕಾರಣದಿಂದ, ಅಮೆರಿಕದ ಬೌದ್ಧಿಕ ವಿಭಾಗದಲ್ಲಿ ದುಡ್ಡು–ಖ್ಯಾತಿ–ಪ್ರಭಾವಗಳನ್ನೆಲ್ಲ ಅನುಭವಿಸಿಕೊಂಡಿದ್ದ, ಆ ಮೂಲಕ ಭಾರತವೂ ಸೇರಿದಂತೆ ಹಲವು ದೇಶಗಳ ರಾಜಕಾರಣವನ್ನು ಪ್ರಭಾವಿಸುತ್ತಿದ್ದ 'ಗ್ಲೋಬಲ್ ಲೆಫ್ಟ್' ಟ್ರಂಪ್ ಅವರ ಈ ಅವಧಿಯಲ್ಲಿ ದೊಡ್ಡ ಹೊಡೆತವನ್ನೇ ತಿನ್ನಲಿಕ್ಕಿದೆ.

### ಅಮೆರಿಕದಲ್ಲಿ ಗ್ಲೋಬಲ್ ಲೆಫ್ಟ್ ಅಸ್ಥಿರವಾದರೆ ಭಾರತಕ್ಕಿದೆ ಲಾಭ! :

2014ರಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಳೆಯವು ಭರ್ಜರಿ ಬಹುಮತದೊಂದಿಗೆ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೂ ಜೆ ಎನ್ ಯುದಲ್ಲಿ ಎಡಪಂಥೀಯರ ಗಲಾಟೆ ಪ್ರಖರವಾಗಿಯೇ ಇತ್ತು. ಅದುವರೆಗೆ ಒಂದು ವಿಚಾರಧಾರೆಯ ಭಾಗವಾಗಿದ್ದ ಸಾಹಿತಿಗಳು, ಬುದ್ಧಿಜೀವಿಗಳು, ವಿದ್ಯಾಕೇಂದ್ರಗಳ ನೀತಿ ನಿರೂಪಕರಿಂದ ಪ್ರಶಸ್ತಿ ವಾಪಸಾತಿ ಎಂಬ ನಡೆಯ ಮೂಲಕ ಸರ್ಕಾರದ ವಿಶ್ವಾಸಾರ್ಹತೆಯನ್ನು ತಗ್ಗಿಸುವ ಪ್ರಯತ್ನಗಳು ದೊಡ್ಡಮಟ್ಟದಲ್ಲಾದವು. ಒಟ್ಟಾರೆ ಮೋದಿ ಸರ್ಕಾರದ ಮೊದಲ ಐದು ವರ್ಷಗಳ ಅವಧಿಯಲ್ಲಿ ಎಡಪಂಥೀಯ ಹಿಡಿತವು ದೇಶದ ಸಂಸ್ಥೆಗಳ ಮೇಲೆ ಇನ್ನೂ ಢಾಳಾಗಿದೆ ಎಂಬುದು ಪಕ್ಕಾ ಆಗಿತ್ತು. ಯಾವಾಗ, ಎರಡನೇ ಅವಧಿಗೂ ಮತ್ತಷ್ಟು ಬಹುಮತದೊಂದಿಗೆ ಮೋದಿ ಸರ್ಕಾರದ ಪುನರಾಗಮನವಾಯಿತೋ, ಆ ನಂತರದಲ್ಲಿ ಬಲಪಂಥೀಯ ಎಂದು ಕರೆಸಿಕೊಳ್ಳುವ ಚಿಂತನೆಗೆ 'ವ್ಯವಸ್ಥೆ'ಯಲ್ಲಿ ಸ್ವಲ್ಪ ಜಾಗ ಸಿಗುವುದಕ್ಕೆ ಶುರುವಾಯಿತು.

ಈ ನಿಧಾನಗತಿ ಬದಲಾವಣೆಗೂ ಕಾರಣಗಳಿದ್ದವು. ಅಕಾಡೆಮಿಕ್, ಚಿಂತನ ಕೂಟ, ನೀತಿ–ನಿರೂಪಣೆ ಇಲ್ಲೆಲ್ಲ ಹೊಸ ವಿಚಾರಧಾರೆಯವರನ್ನು ತರುವುದಕ್ಕೆ ಏಕಾಏಕಿ ಸಿದ್ಧ ಭೂಮಿಕೆ ಇರಲಿಲ್ಲ. ಮುಂದಿನ ಅವಧಿಗೆ ಮತ್ತೆ ಹಳಬರ ವ್ಯವಸ್ಥೆಯೇ ಬಂದರೆ ಏನು ಕತೆ ಎಂಬ ಹಿಂಜರಿಕೆ ಬಲಪಂಥ ಎಂದು ಕರೆಸಿಕೊಳ್ಳುವವರಲ್ಲೂ ಇತ್ತು ಹಾಗೂ ಅಧಿಕಾರ ಇನ್ನೈದು ವರ್ಷಗಳಲ್ಲಿ ಮರಳುತ್ತದೆ ಎಂಬ ವಿಶ್ವಾಸ ಎಡಪಂಥ ಎಂದು ಕರೆಸಿಕೊಳ್ಳುವ ಪಟ್ಟಭದ್ರರಲ್ಲೂ ಇತ್ತು. ಇವೆಲ್ಲವನ್ನು ಮೀರಿದ್ದ ಸಂಗತಿಯೊಂದು ಎಡಪಂಥದವರ ಪಾಲಿಗಿತ್ತು. ಅದೆಂದರೆ, ಭಾರತದಲ್ಲಿ ಎಡಪಂಥಕ್ಕೆ ರಾಜಕೀಯ ಹಿನ್ನಡೆ ಉಂಟಾಗಿದ್ದರೂ 'ಗ್ಲೋಬಲ್ ಲೆಫ್ಟ್' ಎಂಬುದು ಅಮೆರಿಕದ ಡೀಪ್ ಸ್ಟೇಟ್ ಮುಖಾಂತರ ಜೀವಂತವಾಗಿದೆಯಾದ್ದರಿಂದ ತಮಗೊಂದು ಜೀವನಾಡಿ ಇದ್ದೇ ಇರುತ್ತದೆಂಬ ಉತ್ಸಾಹದಲ್ಲಿದ್ದರವರು. ಅದಕ್ಕೆ ಸರಿಯಾಗಿ ವಿದೇಶದ ಎಡರಂಗ ವೇದಿಕೆಗಳು, ಜಾರ್ಜ್ ಸೊರೊಸ್ ಥರದ ಹಣವಂತರು ಭಾರತದ ಪ್ರಜಾ ಆಯ್ಕೆಯ ಸರ್ಕಾರದ ಮೇಲೆ 'ಸರ್ವಾಧಿಕಾರ'ದ ಆರೋಪ ಮಾಡಿಕೊಂಡಿದ್ದರು. ಈ ಹಂತದಲ್ಲಿ, ಇಲ್ಲಿನ ಎನ್ಜಿಒಗಳಿಗೆ ಬರುವ ವಿದೇಶಿ ಫಂಡಿಂಗ್ ಮೇಲೆ ಮೋದಿ ಸರ್ಕಾರ ನಿಯಂತ್ರಣ ಹೇರಿದ್ದೊಂದು ಬಹಳ ಮುಖ್ಯ ಕ್ರಮ. ಎರಡನೇ ಅವಧಿಯಲ್ಲಿ, ಭಾರತವು ವಿದೇಶ ಸಚಿವಾಲಯದ ಮುಖಾಂತರವೂ ಜಾಗತಿಕ ಎಡಪಂಥ ವ್ಯವಸ್ಥೆಗೆ ಮುಲಾಜಿಲ್ಲದ ಉತ್ತರ ಹೇಳುತ್ತ ಬಂತು.

ಈ ಎಡಪಂಥ ವ್ಯವಸ್ಥೆ ಕೇವಲ ಸಾಹಿತ್ಯ–ಸಿದ್ಧಾಂತಗಳ ವಿಷಯದಲ್ಲಿ ಕೆಲಸ ಮಾಡುತ್ತದೆ ಎಂದುಕೊಳ್ಳಬೇಕಿಲ್ಲ. ಭಾರತವು ತನ್ನ ಸಾಂಪ್ರದಾಯಿಕ ಶಸ್ತ್ರ ಪೂರೈಕೆದಾರರ ಹೊರತಾಗಿ, ಫ್ರಾನ್ಸ್ ಮೂಲಕ ರಫೈಲ್ ಯುದ್ಧವಿಮಾನ ಖರೀದಿಗೆ ಮುಂದಾಗುತ್ತಲೇ ವಿವಾದ ಎಬ್ಬಿಸುವ ಪ್ರಯತ್ನಗಳು ಆಗಿದ್ದರಲ್ಲಿ ಈ ಗ್ಲೋಬಲ್ ಲೆಫ್ಟ್ ಗುಂಪಿನ ಪಾಲುದಾರಿಕೆ ಇದೆ. ಥರಹೇವಾರಿ ಸೂಚ್ಯಂಕಗಳ ಮೂಲಕ ಭಾರತವನ್ನು ಪಾಕಿಸ್ತಾನ, ಬಾಂಗ್ಲಾದೇಶ ಇತ್ಯಾದಿಗಳಿಗಿಂತ ಕೆಳಮಟ್ಟದ ಸ್ಥಾನಗಳಲ್ಲಿ ತೋರಿಸಿ, ಆ ಮೂಲಕ ಭಾರತದ ಆತ್ಮವಿಶ್ವಾಸಕ್ಕೆ ಪೆಟ್ಟು ಕೊಡುವ ವ್ಯಾಖ್ಯಾನಗಳನ್ನು ಹೆಣೆಯುವುದರಲ್ಲೂ ಇದು ಕೆಲಸ ಮಾಡಿದೆ. ಕಾಶ್ಮೀರದಿಂದ ಹಿಡಿದು ಕೃಷಿ ಕಾಯ್ದೆವರೆಗೆ ಭಾರತದಲ್ಲಿ ಎಡಪಂಥೀಯರು ಎನಿಸಿಕೊಂಡವರು ಏನೆಲ್ಲ ತಕರಾರುಗಳನ್ನು ತೆಗೆದರೋ ಆ ಪೈಕಿ ಹೆಚ್ಚಿನವರಿಗೆ ಶಕ್ತಿ ಒದಗಿಬಂದಿದ್ದು ಅಮೆರಿಕದ ಗ್ಲೋಬಲ್ ಲೆಫ್ಟ್ ವ್ಯವಸ್ಥೆಯಿಂದಲೇ.

ಇದೀಗ, ಮೂರನೇ ಅವಧಿಗೂ ಭಾರತದಲ್ಲಿ ಎನ್ಡಿಎ ಸರ್ಕಾರವೇ ಅಸ್ತಿತ್ವದಲ್ಲಿರುವುದು ಹಾಗೂ ಅಮೆರಿಕದಲ್ಲಿ ಡೊನಾಲ್ಡ್ ಟ್ರಂಪ್ ಸರ್ಕಾರ ಬಂದಿರುವುದು ಗ್ಲೋಬಲ್ ಲೆಫ್ಟ್ ಅಸ್ತಿತ್ವವನ್ನೇ ಅಲುಗಾಡಿಸುವುದಕ್ಕೆ ಹೊರಟಿರುವ ವಿದ್ಯಮಾನ. ಕೇವಲ ನಾಲ್ಕು ವರ್ಷಗಳ ಟ್ರಂಪ್ ಅಧ್ಯಕ್ಷೀಯ ಅವಧಿಯನ್ನು ಈ ಗ್ಲೋಬಲ್ ಲೆಫ್ಟ್ ಹೇಗಾದರೂ ತಾಳಿಕೊಂಡುಬಿಡುತ್ತಿತ್ತು. ಆದರೆ ಈ ಬಾರಿ ಟ್ರಂಪ್ ವಿಜಯವು 2016ರ ಮೊದಲ ಅವಧಿಗಿಂತ ಭಿನ್ನವಾಗಿದೆ. ಏಕೆಂದರೆ, ಈ ಬಾರಿ ಅದಾಗಲೇ ರಿಪಬ್ಲಿಕನ್ ವ್ಯವಸ್ಥೆಗೆ ಉತ್ತರಾಧಿಕಾರಿಗಳು ಕಾಣಿಸಿಕೊಳ್ಳುತ್ತಿದ್ದಾರೆ. ಅಮೆರಿಕನ್ ಉದ್ಯಮಿ ಎಲಾನ್ ಮಸ್ಕ್, ಟ್ರಂಪ್ ಪ್ರಚಾರದಲ್ಲಿ ಮುಂಚೂಣಿಯಲ್ಲಿ ಪಾಲ್ಗೊಂಡಿದ್ದ ವಿವೇಕ ರಾಮಸ್ವಾಮಿ, ಉಪಾಧ್ಯಕ್ಷ ಪಟ್ಟಕ್ಕೇರುತ್ತಿರುವ ಜೆಡಿ ವಾನ್ಸ್ ಇವರೆಲ್ಲರೂ ಟ್ರಂಪ್ ಅವಧಿ ಮುಗಿದ ನಂತರದಲ್ಲೂ ಬಲಪಂಥೀಯ ರಾಜಕೀಯ ವಿಚಾರಧಾರೆಯನ್ನು ಪ್ರಖರವಾಗಿಡುವ ಸೂಚನೆಯನ್ನು ಅದಾಗಲೇ ಕೊಟ್ಟಿದ್ದಾರೆ. ಅಮೆರಿಕದ ಸಂವಿಧಾನದ ಪ್ರಕಾರ ಒಬ್ಬ ವ್ಯಕ್ತಿ ಎರಡು ಅವಧಿಗಳಿಗೆ ಮಾತ್ರವೇ ಅಧ್ಯಕ್ಷನಾಗಬಹುದು. ಹೀಗಾಗಿ, ಟ್ರಂಪ್ ನಂತರ ಮುಂದಿನ ಚುನಾವಣೆಯಲ್ಲಿ ಎಲಾನ್ ಮಸ್ಕ್ ಕಣಕ್ಕಿಳಿಯಬಹುದಾ ಎಂಬ ನಿರೀಕ್ಷೆ–ವಿಶ್ಲೇಷಣೆಗಳು ಈಗಾಗಲೇ ಗರಿಗೆದರಿವೆ.

### ಡೀಪ್ ಸ್ಟೇಟ್, ಎಡಪಂಥವನ್ನು ದೀರ್ಘಾವಧಿಗೆ ಪಕ್ಕ ತಳ್ಳುವುದು ಸಾಧ್ಯವಾ?:

ಪ್ರತಿಭಾವಂತರಿಗೆ ಅಮೆರಿಕವು ಯಾವತ್ತೂ ತೆರೆದುಕೊಂಡಿರಬೇಕು ಎಂಬ ಪ್ರತಿಪಾದನೆ ಎಲಾನ್ ಮಸ್ಕ್ ಅವರದ್ದು. ಮಕ್ಕಳ ಮೇಲೆ ಪಾಲಕರ ಹಕ್ಕಿಲ್ಲ, ಅವರು ಲಿಂಗ ಬದಲಾವಣೆಗೆ ಸ್ವತಂತ್ರರು ಎಂಬೆಲ್ಲ ಸ್ವೇಚ್ಛಾಚಾರದ ನೀತಿಗಳಿಗೆ ಮಸ್ಕ್ ಅವರದ್ದು ಕಡು ವಿರೋಧ. ವಿವೇಕ ರಾಮಸ್ವಾಮಿ ಅವರಂತೂ ಭಾರತದ ನಾಗರಿಕ ಚಿಂತನೆಯನ್ನೇ ಧ್ವನಿಸುವಂಥವರು. ರಿವರ್ಸ್ ರೇಸಿಸಂ ಅನ್ನೋದು ಸಹ ರೇಸಿಸಂ ಅಂತ ಘಂಟಾಘೋಷವಾಗಿ ಸಾರಿದವರು ಅವರು. ಅಂದರೆ ಕಪ್ಪು ವರ್ಣದ ಅಮೆರಿಕನ್ ಪ್ರಜೆಯನ್ನು ಆತನ ಜನಾಂಗದ ಕಾರಣಕ್ಕಾಗಿ ಕೀಳಾಗಿ ಕಾಣುವುದು ಹೇಗೆ ಅಪರಾಧವೋ, ಅದೇ ರೀತಿ ಬಿಳಿಯ ಅಮೆರಿಕನ್ ಎಂದಕೂಡಲೇ ಆತನನ್ನು ಶೋಷಕನ ಸ್ಥಾನದಲ್ಲಿರಿಸೋದೂ ಜನಾಂಗೀಯ ನಿಂದನೆಯೇ ಆಗುತ್ತದೆ ಎಂದರವರು. ಭಾರತದಲ್ಲಿ ಎಲ್ಲವಕ್ಕೂ ಮೇಲ್ವರ್ಗದವರನ್ನೇ ದೂರುವ ಬುದ್ಧಿಜೀವಿಗಳನ್ನೊಮ್ಮೆ ನೆನಪು ಮಾಡಿಕೊಂಡರೆ, ಇದೇ ಜಾಡಿನ ಪ್ರತಿಪಾದನೆ ನಮಗೂ ಎಷ್ಟು ಮುಖ್ಯ ಎಂದು ಅರ್ಥವಾಗುತ್ತದೆ.

ಪ್ರಾಯೋಗಿಕವಾಗಿ ನೋಡಿದಾಗಲೂ, ಇದೀಗ ರಾಜಕೀಯದಲ್ಲಿ ಗುರುತಿಸಿಕೊಂಡಿರುವ ವಿಶ್ವದ ಅತಿ ಶ್ರೀಮಂತ ವ್ಯಕ್ತಿ ಎಲಾನ್ ಮಸ್ಕ್ ಅವರಿಗೆ ದೀರ್ಘಾವಧಿಗೆ ತಮ್ಮ ಸ್ಥಾನ ಬಲಪಡಿಸಿಕೊಳ್ಳಬೇಕಾದ ಅಗತ್ಯವಿದೆ. ಜಾರ್ಜ್ ಸೊರೊಸ್, ಬಿಲ್ ಗೇಟ್ಸ್ ಥರದ ಡೀಪ್ ಸ್ಟೇಟ್ ಆಟಗಾರರನ್ನು ಪಕ್ಕಕ್ಕೆ ಸರಿಸಿಯೇ ಎಲಾನ್ ಮಸ್ಕ್ ತಮ್ಮ ಆಟ ಕಟ್ಟಬೇಕಾಗುತ್ತದೆ. ಈ ಹಿಂದಿನ ಡೀಪ್ ಸ್ಟೇಟ್ ಶ್ರೀಮಂತರಿಗೆ ರಕ್ಷಣಾ ಉದ್ಯಮಕ್ಕೆ ಸೇರಿದಂತೆ ಹಿತಾಸಕ್ತಿಗಳಿದ್ದವು. ಹಾಗೆಂದೇ ಜಗತ್ತಿನಲ್ಲಿ ಯುದ್ಧಗಳಾಗುತ್ತಿದ್ದರೆ ಅವರಿಗೆ ಲಾಭವಾಗುತ್ತಿರುತ್ತಿತ್ತು ಎಂಬ ವಾದವಿದೆ. ಇದೀಗ ಮಸ್ಕ್'ಗೆ ಬೇಕಿರುವುದು ಚಂದ್ರಯಾನ–ಮಂಗಳಯಾನ, ನವೀನ ತಂತ್ರಜ್ಞಾನದ ಸಂಪರ್ಕ ಸಾಧನಗಳು ಇತ್ಯಾದಿಗಳ ಮೂಲಕ ನಡೆಯುವ ವಿಶ್ವ ವ್ಯಾಪಾರ. ಹೀಗಾಗಿ ಎಡಪಂಥ ಪೋಷಕರಾದ ಹಳೆಯ ಧನಿಕರೆಲ್ಲ ನೇಪಥ್ಯಕ್ಕೆ ಸರಿಯಲಿದ್ದಾರೆ.

ಎಡಪಂಥೀಯರ ಆಡುಂಬೊಲವಾಗಿದ್ದ, ಅವರಿಗೆ ಸಲ್ಲದವರನ್ನು ಸೆನ್ಸಾರ್ ಮಾಡುತ್ತಿದ್ದ ಟ್ವಿಟ್ಟರ್ ಅನ್ನು ಖರೀದಿಸಿ ಅದನ್ನು ಎಕ್ಸ್ ಆಗಿ ಪರಿವರ್ತಿಸಿ ಬಲಪಂಥಕ್ಕೊಂದು ಮಾಧ್ಯಮ ವ್ಯವಸ್ಥೆ ರೂಪಿಸಿದವರು ಮಸ್ಕ್. ಹಾಗೆಂದೇ ಈ ಬಾರಿ ಅಮೆರಿಕದ ಮುಖ್ಯವಾಹಿನಿ ಮಾಧ್ಯಮ ವೇದಿಕೆಗಳೆಲ್ಲ ಟ್ರಂಪ್ ವಿರೋಧಿ ಸುದ್ದಿ–ವಿಶ್ಲೇಷಣೆಗಳನ್ನೇ ಕೊಟ್ಟರೂ ಚುನಾವಣೆಯ ಫಲಿತಾಂಶದ ಮೇಲೆ ಪರಿಣಾಮ ಬೀರಲಾಗಲಿಲ್ಲ. ಆ ಮೂಲಕ ಅಮೆರಿಕದ ಎಡಪಂಥೀಯ ಮಾಧ್ಯಮ ಜಗತ್ತು ಸಹ ತನ್ನ ಪ್ರಸ್ತುತತೆ ಕಳೆದುಕೊಂಡಿದೆಯೆಂಬುದನ್ನು ಮಸ್ಕ್ ಸಾರಿದರು. ಮಸ್ಕ್ ಆಗಲೀ, ಇನ್ಯಾವುದೇ ಶ್ರೀಮಂತನಾಗಲೀ ಕೇವಲ ನಾಲ್ಕು ವರ್ಷಗಳ ಅವಧಿಯ ಒಬ್ಬ ವ್ಯಕ್ತಿಯ ಅಧಿಕಾರಾವಧಿ ಬೆಂಬಲಕ್ಕಾಗಿ ಇಷ್ಟೆಲ್ಲ ಮಾಡುವುದಿಲ್ಲ. ಟ್ರಂಪ್ ಅವಧಿ ಮುಗಿಯುತ್ತಲೇ ಇನ್ನೊಬ್ಬ ಪ್ರಬಲ ರಿಪಬ್ಲಿಕನ್ ಕೈಗೆ ಅಮೆರಿಕದ ಅಧಿಕಾರ ಸಿಗುವಂತೆ ಮಾಡುವುದಕ್ಕೆ ಮಸ್ಕ್ ಹಾಗೂ ಟ್ರಂಪ್ ಸಮೀಪವರ್ತಿಗಳೆಲ್ಲರ ಪ್ರಯತ್ನವಿದ್ದಿರುತ್ತದೆ. ಹೀಗಾಗಿಯೇ ಜಾಗತಿಕ ಎಡಪಂಥ ಎನ್ನುವುದು ದೀರ್ಘಾವಧಿ ಅಜ್ಞಾತವಾಸವೊಂದಕ್ಕೆ ಅಭಿಮುಖವಾಗಿ ನಿಂತಿದೆ.

## ಕೊಪ್ಪಳ ಜಿಲ್ಲೆಯಲ್ಲಿ ಹೆಚ್ಚುತ್ತಿರುವ ವಾರದ ಬಡ್ಡಿ ಸಾಲ;

# ಮೈಕ್ರೋ ಫೈನಾನ್ಸ್‌ಗಳಿಂದ ಗ್ರಾಮೀಣ ಭಾಗದ ಜನರ ಜೀವನ ಅಯೋಮಯ







ಭಾರತದಲ್ಲಿ ಅದರಲ್ಲಿಯೂ ವಿಶೇಷವಾಗಿ ಕರ್ನಾಟಕದಲ್ಲಿ ಸಹಕಾರಿ ಸಂಘಗಳಿಗೆ ಒಂದು ವಿಶೇಷ ಇತಿಹಾಸವಿದೆ. ಇದೆ. ಬದುಕಿದೆ, ಪರಸ್ಪರ ಸಾಮರಸ್ಯವಿದೆ.1950 ರಲ್ಲಿ ಹುಟ್ಟಿಕೊಂಡ ಸಹಕಾರಿ ಸಂಘಗಳಾದಿಯಾಗಿ ಇತ್ತೀಚಿನ ಕೃಷಿ ಪತ್ತಿನ ಸಹಕಾರಿ ಸಂಘಗಳು, ಸ್ತ್ರೀಶಕ್ತಿ ಸಂಘಗಳು, ದುಡಿಯುವ ವರ್ಗದ ಸಂಘಗಳವರೆಗೆ ಮುಂದುವರಿದಿದೆ. ಇಲ್ಲಿ ಕೆಲವು ಜನರು ಕೂಡಿಕೊಂಡು ತಮ್ಮ ದುಡಿಮೆಯ ಇಂತಿಷ್ಟು ಭಾಗದ ಹಣವನ್ನು ಉಳಿತಾಯ ಮಾಡುತ್ತಾರೆ. ಕೂಡಿಟ್ಟ ಹಣವನ್ನು ಅವಶ್ಯಕತೆಯ ಆದಾರದಲ್ಲಿ ಸಂಗ್ರಹದ ಒಟ್ಟಾರೆಯ ಒಂದಿಷ್ಟು ಭಾಗವನ್ನು ಕಡಿಮೆ ಬಡ್ಡಿ ದರದಲ್ಲಿ ಸಾಲ ಎಂದು ತಮ್ಮ ತಮ್ಮಲ್ಲೇ ಒಬ್ಬೊಬ್ಬರೆಂದು ಬಳಸಲು ಪರಸ್ಪರ ಸದಸ್ಯದಿಂದ ಅನುಮತಿಸಲಾಗುತ್ತದೆ. ಈ ಕಿರುಸಾಲ ಪದ್ಧತಿಯು ಸಮಗ್ರ ಸಮುದಾಯದ ಅಭಿವೃದ್ಧಿಯನ್ನು ಸಾಧಿಸಲು ಆರ್ಥಿಕವಾಗಿ ಬೆನ್ನೆಲುಬಾಗಿ ನಿಲ್ಲುತ್ತದೆ. ಆದರೆ ಇಂತಹ ಸಂಘಗಳ ಹೆಸರಲ್ಲಿ ಇಂದು ಹಲವಾರು ಮೈಕ್ರೋ ಫೈನಾನ್ಸ್ ಸಂಸ್ಥೆಗಳು, ಖಾಸಗಿ ಲೇವಾದೇವಿಗಾರರು, ವಾರದ ಬಡ್ತಿ ಮೀಟರ್ ಬಡ್ಡಿ ಭೂತಗಳು ಜನರ ನೆಮ್ಮದಿಯನ್ನು ಕೆಡಿಸಿರುವುದಷ್ಟೇ ಅಲ್ಲ ಹಲವು ಜೀವಗಳನ್ನು ಬಲಿ ತೆಗೆದುಕೊಂಡಿವೆ ಎಂಬುದು ಅರ್ಥವಾಗುತ್ತದೆ. ಇದನ್ನೂ ಓದಿ ಮಿತಿ ಮೀರಿದ ಮಾಲಿನ್ಯ ಸುಪ್ರೀಂ ಕೋರ್ಟ್ ತರಾಟ ಆದರೆ ದುರ್ಬಲರ ಅನಿವಾರ್ಯತೆ ಮತ್ತು ಸಹಕಾರಿ ಕ್ಷೇತ್ರದ ಭಾಗವಾಗಿ ಜನಸೇವೆಯ ಮುಖವಾಡ ಹೊತ್ತ ಬಂಡವಾಳತಾಹಿಗಳ ಲಾಭಕೋರತನ ಕಿರುಸಾಲ ವ್ಯವಸ್ಥೆಗೆ ಕಾಲಿಟ್ಟು ಹಲವು ದಶಕಗಳೇ ಕಳೆದಿವೆ. ಆದರೆ ಸೇವೆಗಳ ಹೆಸರಲ್ಲಿ ಜನ ಸಮುದಾಯಗಳ ಮೇಲೆ ಇವುಗಳ ಆಕ್ರಮಣ ಇಂದು ಮುಗಿಲು ಮುಟ್ಟಿದೆ. ಜೊತೆಗೆ ಜನರ ಅಕ್ರಂದನವೂ ಈ ವ್ಯವಸ್ಥೆಯ ಪರಿಣಾಮಗಳು ವಿಜಯನಗರ ಜಿಲ್ಲೆಯ ಹೂವಿನಹಡಗಲಿ ತಾಲೂಕಿನಲ್ಲಿ ಗಾಢವಾಗಿ ಗೋಚರವಾಗುತ್ತದೆ ಈ ಸಾಲಮೂಲಗಳ ಕಪಿಮುಷ್ಟಿಗೆ ಸಿಲುಕಿಕೊಂಡ ಸಾಮಾನ್ಯ ಜನರ ಗೋಳಾಟ ನಿತ್ಯವೂ ಕಾಣಸಿಗುತ್ತದೆ. ಇನ್ನು ವಾರದ ನಿಗದಿತ ದಿನ ಬಂತೆಂದರೆ ಸಾಕು ಇಲ್ಲಿನ ಜನರ ಪೇಚಾಟ ಇನ್ನೂ ಹೆಚ್ಚಾಗುತ್ತದೆ. ಏಕೆಂದರೆ ಬಹುತೇಕ ಸಂಘಗಳ ಸದಸ್ಯರು ವಾರಕ್ಕೊಮ್ಮೆ ಸೇರುವುದರಿಂದ ಅದು ವಾರದ ಮರುಪಾವತಿಯೂ ಕೂಡ ಆ ದಿನ ಆಗಿರುತ್ತದೆ. ಈ ಕಿರು ಹಣಕಾಸು ಸಂಸ್ಥೆಗಳು ಮತ್ತು ಖಾಸಗಿ ಲೇವಾದೇವಿದಾರರಿಂದ ಸಾಲ ಪಡೆದುಕೊಂಡ ಕುಟುಂಬಗಳ ಚಿತ್ರಣವನ್ನು ಗಮನಿಸಿದರೆ ಅವರ ಆತಂಕ ಅರ್ಥವಾಗುತ್ತದೆ. ಇದನ್ನೂ ಓದಿ ಭೂ ಬಾಣ । ಪಿ ಮಹಮ್ಮರ್ ಕಾಡೋನ್

ಯುವಕನ ಹೆಸರು ರಾಜು, ಮೂರು ಜನ ಅಣ್ಣ ತಮ್ಮಂದಿರು ಇದ್ದಾರೆ. ಜೀವನ ನಿರ್ವಹಣೆಗೆ ತಂದೆಯ ಸೈಂಟರ್ ಕೆಲಸ ಅವಿಭಕ್ತ ಕುಟುಂಬವಾದುದರಿಂದ ಇವರ ತಂದೆಗೆ ಮನೆಯ ಜವಾಬ್ದಾರಿ ಹೆಚ್ಚು ಹೇಗೋ ಸಾಗುತ್ತಿದ್ದ ಬದುಕು ಮಗಳ ಮದುವೆ, ಮಗನ ಮದುವೆಗೆ ಮತ್ತೊಂದಿಷ್ಟು ಸಾಲ ಸೇರ್ಪಡೆಯಾಯಿತು ಅದನ್ನು ತೀರಿಸಲು ಜನಸೇವೆಯ ಮುಖವಾಡ ಹೊತ್ತ ಸಂಘವೊಂದರಿಂದ ಸಾಲ ಮಾಡಿಕೊಂಡರು. ನಂತರ ದಿನನಿತ್ಯದ ಖರ್ಚುಗಳಿಗೆ ಮತ್ತು ಈ ಸಂಘಗಳಲ್ಲಿನ ಸಾಲಗಳನ್ನು ತೀರಿಸಲು ಟಾಟಾ ಕ್ಯಾಪಿಟಲ್ ಮತ್ತು ಇತರ ಮೈಕ್ರೋ ಫೈನಾನ್ಸ್ ಗಳಿಂದ ಸಾಲ ಮಾಡಿಕೊಂಡಿದ್ದಾರೆ. ನಂತರ ಈ ಸಾಲದ ಕಂತುಗಳನ್ನು ಕಟ್ಟಲು ತಮ್ಮ ಶಕ್ತಿ ಮೀರಿದಾಗ ಸುಲಭಕ್ಕೆ ಸಿಗುವ ಕಡೆಗಳಲ್ಲೆಲ್ಲಾ ಖಾಸಗಿ ಲೇವಾದೇವಿಗಾರರ ಬಳಿ ಮಿತಿಮೀರಿದ ಬಡ್ಡಿಗೆ ಸಾಲ ತೆಗೆದುಕೊಂಡಿದ್ದಾರೆ ಕೊನೆಗೆ ಆ ಸಾಲಗಾರರ ಒತ್ತಡ ತಾಳಲಾರದೆ ಭಯ ಮತ್ತು ಅವಮಾನದಿಂದ ತಂದೆ ತಾಯಿಗಳ ಸಮೇತ ಹುಟ್ಟೂರು ಬಿಡಬೇಕಾದ ಅನಿವಾರ್ಯತೆ ಸೃಷ್ಟಿಯಾಯಿತು ಇದನ್ನೂ ಓದಿ ಜಾಗೃತಿಯ 20 ಬಗೆಗಳು ಇವರ ಈಗಿನ ಕಥೆ ಎಷ್ಟು ದಾರುಣವಾಗಿದೆ ಎಂದರೆ ಹಿಡಿಯ ಮಗ ಪೈಂಟರ್ ಕೆಲಸ ಮಾಡುತ್ತಾ ಶಿವಮೊಗ್ಗ ಕೊಪ್ಪಳ ಎಂದು ಉದ್ಯೋಗವರಸಿ ಸಾಲ ತೀರಿಸಲು ಹೆಣಗಾಡುತ್ತಿದ್ದರೆ, ತಮ್ಮಂದಿರು ಬೆಂಗಳೂರಿನಲ್ಲಿ ಕಟ್ಟಡ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಸಾಲದೆಂಬಂತೆ ಅವರ ತಂದೆ ಸೆಕ್ಯೂರಿಟಿ ಮಾಡುತ್ತಾ ಸಾಲ ತೀರಿಸಲು ಹೆಣಗಾಡುತ್ತಿದ್ದಾರೆ. ಇನ್ನು ಹಡಗಲಿಯಲ್ಲಿ ಇವರು ಹುಟ್ಟಿ ಬೆಳೆದ ಗುಬ್ಬಿಗೂಡಿನಂತಹ ಪುಟ್ಟ ಮನೆಗೆ ವಾರದ ಬಡ್ಡಿಯ ಹಾಗೆ ಇಪ್ಪತ್ತು ಸಾವಿರ ರೂ. ಸಾಲ ನೀಡಿದ ವ್ಯಕ್ತಿಯ ಕಣ್ಣು ಬಿದ್ದಿದೆ. ಯಾರೂ ವಾಸವಿಲ್ಲದೆ ಮನೆ ಬಳಕೆಯ ಸಾಮಾನು ಸರಂಜಾಮುಗಳು ಮಾತ್ರ ಇರುವ ಈ ಪುಟ್ಟ ಮನೆಗೆ ತನ್ನದಂಬಂತೆ ಬೀಗ ಹಾಕಿದ್ದಾನೆ. ಮನೆಯವರು ಬಾಗಿಲು ತೆಗೆಯಲು ಬಂದರೆ 'ನೀವು ಬಡ್ಡಿ ಸೇರಿ 70ರಿಂದ 80 ಸಾವಿರ ರೂ. ನೀಡಬೇಕಿದೆ, ಹಾಗಾಗಿ ಈ ಮನೆಯನ್ನು ಬಾಡಿಗೆಗೆ ನೀಡಿ ಸಾಲ ವಸೂಲಿ ಮಾಡುತ್ತೇವೆ' ಎಂದು ಮನೆ ತನ್ನ ವಶಕ್ಕೆ ತೆಗೆದು ಕೊಳ್ಳುವ ದರ್ಪ ತೋರಿಸುತ್ತಾನೆ. ಒಟ್ಟಿನಲ್ಲಿ ಈ ಮನೆಯವರಿಗೆ ಸಾಲ ತೀರಿಸುವ ಬೇತದ ಹೊರತು ಬದುಕಿನ ಕುರಿತು ಯಾವುದೇ ಆಶಾಭಾವನೆ ಉಳಿದಿಲ್ಲ ಬದುಕಬೇಕೆಂದರೆ ಜೀತ ಮಾಡಬೇಕಷ್ಟೆ. ಘಟನೆ ಎರಡು ಸಾಲದ ಶೂಲಕ್ಕೆ ಮಹಿಳೆ ಬಲಿಯಾದ ಮತ್ತೊಂದು ಘಟನೆ ನೋಡುವುದಾದರೆ ಕೂಲಿ ಕೆಲಸ ಮಾಡುವ ಮಕ್ಕಳು, ಗಂಡನ ಸಣ್ಣ ಬೀಡಿ ಅಂಗಡಿಯಿಂದ ನೆಮ್ಮದಿಯಾಗಿ ನಡೆಯುತ್ತಿದ್ದ ಸಂಸಾರ ಮನೆಯ ಸದಸ್ಯರ ಯಾವುದೋ ಅನಿವಾರ್ಯಕ್ಕೆ ಸಾಲಕ್ಕೆ ತುತ್ತಾಯಿತು. ಇಲ್ಲಿ ಜನಸೇವೆಯ ಮುಖವಾಡ ಹೊತ್ತ ಸಂಘವೊಂದರಿಂದ ಆದಿಯಾಗಿ ಅನೇಕ ಫೈನಾನ್ಸ್ ಗಳಲ್ಲಿ ಸಾಲ ಮಾಡುವ ಪರಿಸ್ಥಿತಿ ಎದುರಾಯಿತು. ಈ ಅನಿವಾರ್ಯತೆಯ ಗಂಡಾಂತರ ಕ್ರಮೇಣ ವಾರದ ಬಡ್ಡಿಯ ಮೂಲಕ ಸಾಲ ಹಡೆಯುವವರೆಗೂ ಮುಂದುವರಿಯುತ್ತದೆ ಈ ರೀತಿ ಕಾನೂನುಬಾಹಿರ ಮೂಲಗಳಿಂದ ಸಾಲ ಪಡೆದುಕೊಂಡು ಅವರ ಬದುಕು ಎಷ್ಟು ಕ್ರೌರ್ಯಕ್ಕೊಳಗಾಗಿತ್ತೆಂದರೆ, ಕೊನೆಗೆ ಈ ಮಹಿಳೆ ಸಾಲದ ಮರುಪಾವತಿಗೆ ಪರಿಹಾರ ದೊರಕದೆ ವೇಣಿಗೆ ತನ್ನ ಕೊರಳೊಡ್ಡಬೇಕಾಯಿತು. ಇಲ್ಲಿಗೆ ಅವಳು ತನ್ನ ಹೆಸರಲ್ಲೇ ಸಾಲ ತೆಗೆದುಕೊಂಡಿದ್ದ ಕೆಲವು ಮೈಕ್ರೋ ಫೈನಾನ್ಸ್ ಗಳ ಸಾಲ ಸಮಾಪ್ತಿಯಾಗಬಹುದು ಆದರೆ ಈ ಮಹಿಳೆಯು ಗುಂಪು ಸಂಘದ ಇತರ ಸದಸ್ಯರ ಹೆಸರಿನಲ್ಲಿಯೂ ಕೂಡ ಸಾಲ ಪಡೆದುಕೊಂಡಿರುವುದು, ತನ್ಮೂಲಕ ನಾಲಕ್ಕೆ ಸಹಿ ಹಾಕಿದ ಅ ಮಹಿಳೆಯರಿಗೆ ಸ್ವತಃ ತಾವೇ ಆ ಸಾಲ ತೀರಿಸಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಇನ್ನು ಒಂದು ಜೀವ ಬಲಿ ಪಡೆದ ವಾರದ ಬಡ್ಡಿ ನೀಡುವ ಖಾಸಗಿ ಲೇವಾದೇವಿದಾರರು ಕೈಕೈಹಿಸಿಕೊಳ್ಳುವಂತಾಗಿದೆ. ಹೀಗೆ ಆರ್ಥಿಕ ಸಮಸ್ಯೆಯೂ ಸಾಮಾಜಿಕ ಸಮಸ್ಯೆಯಾಗಿ ಬದಲಾಗಿ ಮೆರೆಯುತ್ತಿರುವ ಈ ಕ್ರೌರ್ಯಕ್ಕೆ ಏನು ಕಾರಣ ಎಂದು ವಿಮರ್ಶಿಸುವುದಾದರ ಅನೇಕ ಅಂಶಗಳು ನಮ್ಮ ಮುಂದೆ ಬಂದು ನಿಲ್ಲುತ್ತವೆ. ಮೈಕ್ರೋ ಫೈನಾನ್ಸ್‌ಗಳ ಹಾವಳಿ:

ಸಾಮಾನ್ಯ ಬಡಜನರ ಸಹಾಯದ ನೆಪವಾಗಿ ಬಂದ ಸಾಲ ಕೊಡುವ ಸಂಘಗಳು ಇಂದು ಅಕ್ಷರಶಃ ಆರ್ಥಿಕವಾಗಿ ಹಿಂದುಳಿದ, ದುರ್ಬಲರ ಪಾಲಿಗೆ ಸಿಹಿಲೇಪಿತ ವಿಷುಂಡಗಳಾಗಿ ಪರಿಣಮಿಸಿವೆ. ವೈಯಕ್ತಿಕ ಸಾಲಗಳ ಮೇಲೆ ನಮ್ಮ ಬ್ಯಾಂಕ್‌ಗಳು ಶೇ. 10ರಿಂದ 16ರವರೆಗೆ ಬಡ್ಡಿದರದಲ್ಲಿ ಸಾಲ ನೀಡಿದರೆ, ಮೈಕ್ರೋ ಫೈನಾನ್ಸ್ (ಜನಭಾಷೆಯಲ್ಲಿ ಸಂಘ) ಶೇ. 24ರ ಬಡ್ಡಿ ದರದಲ್ಲಿ ಸಾಲ ನೀಡುತ್ತದೆ. ಸಾಮಾನ್ಯ ಜನರು ಸಿಬಿಲ್ ಸ್ಕೋರ್ ತಲೆನೋವು, ಅಡಮಾನಗಳ ಅವಶ್ಯಕತೆ ಇಲ್ಲದೆ ಕೇವಲ ಪಡೆಯುವುದರಿಂದ ಈ ಶೇ. 24 ಬಡ್ಡಿಯ ಪ್ರಮಾಣದ ಕುರಿತು ಅವರು ಗಮನ ಹರಿಸುವುದಕ್ಕೆ ಹೋಗುವುದಿಲ್ಲ. ಮುಖ್ಯವಾಗಿ ಯಾವುದೇ ಮೈಕ್ರೋ ಫೈನಾನ್ಸ್‌ಗಳ ಉದ್ಯೋಗಿಗಳ ಬಳಿ ಸಾಲಕ್ಕೆ ಪ್ರತಿಯಾಗಿ ಬಡ್ಡಿ ಎಷ್ಟಾ ವಿಧಿಸುತ್ತೀರಿ ಎಂದರೆ ಒಂದು ರೂಪಾಯಿ ಅಷ್ಟೇ ಎಂದು ಸುಳ್ಳು ಹೇಳುತ್ತಾರೆ. ವಾಸ್ತವದಲ್ಲಿ ಅಲ್ಲಿ ರೂ.2ಕ್ಕೂ ಅಧಿಕ ಬಡ್ಡಿ ವಿಧಿಸಲಾಗುತ್ತದೆ ಆದರೆ ಸಾಲ ಪಡೆದ ತಪ್ಪಿಗೆ ತಮ್ಮ ದುಡಿಮೆಯ ಬಹುಪಾಲನ್ನು ನಿರಂತರವಾಗಿ ಕಟ್ಟುತ್ತಲೇ ಹೋಗುತ್ತಾರೆ. ಈ ಮಾದರಿಯನ್ನೇ ಇಟ್ಟುಕೊಂಡು ಇಂದು ಟಾಟಾ ಕ್ಯಾಪಿಟಲ್, ಸಂಜೀವಿನಿ, ಚೈತನ್ಯ ಮತ್ತು ಇತರ ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಚಲಾವಣೆಯಲ್ಲಿವೆ. ಇವು ಲಾಭಕ್ಕಾಗಿ ಕಾರ್ಯನಿರ್ವಹಿಸುತ್ತೇವೆ ಎಂದು ಮುಕ್ತವಾಗಿ ಹೇಳಿಕೊಳ್ಳುತ್ತದೆ. ಆದರೆ ಸಮಾಜ ಸೇವೆಯ ಘೋಷಿತ ಮುಖ ಹೊತ್ತ ಸಂಸ್ಥೆಗಳೇ ಜನರ ಬದುಕಿನ ಆತಂಕಗಳಿಗೆ ಕಾರಣವಾಗಿದೆ. ಈ ಸಂಘಗಳ ಮತ್ತೊಂದು ವಿಶೇಷವೆಂದರೆ ಇಲ್ಲಿ ಗುಂಪು ಸದಸ್ಯರಲ್ಲಿ ಒಬ್ಬರು ಸಾಲ ಮರು ಪಾವತಿಸದಿದ್ದರೆ ಆ ಕಟ್ಟಲಾಗದ ವ್ಯಕ್ತಿಯ ಸಾಲ ಮರುಪಾವತಿ ಮಾಡುವ ಸಂಪೂರ್ಣ ಜವಾಬ್ದಾರಿ ಉಳಿದ ಸದಸ್ಯರು ಹೊತ್ತುಕೊಳ್ಳಬೇಕಾಗುತ್ತದೆ. ಇದಕ್ಕೆ ಪ್ರತಿಯಾಗಿ ಆ ಕಟ್ಟಲಾಗದ ವ್ಯಕ್ತಿ ಉಳಿದವರ ಕೋಪ, ಸಿಟ್ಟು ದ್ವೇಷ ಮತ್ತು ಮತ್ತರಕ್ಕೂ ಗುರಿಯಾಗಬೇಕಾಗುತ್ತದೆ. ಇಂತಹ ಸಿಟ್ಟು ದ್ವೇಷ, ಕೋಪ ಮತ್ಸರಗಳೆಂಬ ಸಾಮಾಜಿಕ ಕಾರಣಗಳೇ ಆತ್ಮಹತ್ಯೆಗೆ ಕಾರಣವಾಗುತ್ತಿರುವುದು.

**ಎಲ್ಲಾ ಮೂಲವನ್ನು ಮೀರಿಸಿದ ವಾರದ ಬಡ್ಡಿಯ ದಬ್ಬಾಳಿಕೆ:** ಪ್ರಸಕ್ತ ಅಧ್ಯಯನಕ್ಕೆಂದು ಕೊಪ್ಪಳದ ಸಾಲಬಾಧಿತ ಕುಟುಂಬಗಳನ್ನು ಸಂದರ್ಶಿಸಿದಾಗ ಆ ಕುಟುಂಬಗಳು ಅತಿ ಹೆಚ್ಚಾಗಿ ವಾರದ ಬಡ್ಡಿ ಸಾಲಬಾಧೆಯಿಂದ ಬಳಲುತ್ತಿರುವುದು ಕಂಡುಬಂದಿದೆ. ಇಲ್ಲಿ ಒಮ್ಮೆವಾರದ ಬಡ್ಡಿ ಮೂಲಕ ಒಬ್ಬ ವ್ಯಕ್ತಿ ಸಾಲ ಪಡೆದವೆಂದರೆ ಈ ವಿಷವರ್ತುಲದಿಂದ ಅವನು/ಅವಳು ಪಾರಾಗುವುದು ಕಷ್ಟಸಾಧ್ಯ ಏಕೆಂದರೆ ಯಾವುದೋ ಅನಿವಾರ್ಯ ಕಾರಣಕ್ಕೆ ಪಡೆದ ಇಂತಹ ಸಾಲಗಳನ್ನು ತೀರಿಸುವುದು ತೀರಾ ಕಷ್ಟಸಾಧ್ಯ ಏಕೆಂದರೆ ಈ ವಾರದ ಬಡ್ಡಿ ಸಾಲ ದೊರಕುವುದು ಹೆಚ್ಚಾಗಿ ಶೇ. 10ರಷ್ಟು ವಾರದ ಬಡ್ಡಿಯ ದರದಲ್ಲಿ ಕೊಪ್ಪಳ ಜಿಲ್ಲಾ ಕೇಂದ್ರವಾದರೂ ಈ ಪ್ರದೇಶದ ಹೆಚ್ಚಿನ ಜನರ ದುಡಿಮೆ ಕೃಷಿ, ಸಣ್ಣಪುಟ್ಟ ವ್ಯಾಪಾರ ಮತ್ತು ಇತರ ಕೂಲಿ ಹಿನ್ನೆಲೆಯನ್ನು ಇವರ ದಿನಗೂಲಿಯ ಪ್ರಮಾಣವು ದಿನಕ್ಕೆ ರೂ. 300ರಿಂದ 600 ಮಾತ್ರ ಪರಿಸ್ಥಿತಿ ಹೀಗಿರುವಾಗ ಒಮ್ಮೆ ಸಾಲಗಾರರಿಂದ 50,000 ರೂ. ಸಾಲ ಪಡೆದರೆ ಪ್ರತೀ ವಾರಕ್ಕೆ ಸರಿಯಾಗಿ 5,000 ರೂ. ಬಡ್ಡಿ ಕೊಡಬೇಕಾಗುತ್ತದೆ. ಇನ್ನೊಂದು ವಿಶೇಷವೇನೆಂದರೆ ಈ ಸಾಲಗಾರರು ಸಾಲ ಕೊಡುವ ಸಮಯದಲ್ಲೇ ಮೊದಲ ವಾರದ ಬಡ್ಡಿ ಶೇ. ಹತ್ತರಷ್ಟು ಅಂದರೆ 5,000 ರೂ. ಬಡ್ಡಿ ಎಂದು ಮುರಿದುಕೊಂಡೇ ನಾಲ ಕೊಡುತ್ತಾರೆ. ಹೀಗೆ ಆರಂಭವಾಗುವ ಈ ಅಧುನಿಕ ಜೀತ ಪದ್ಧತಿಯು ಮುಂದುವರಿಯುತ್ತಾ ಹೋಗುತ್ತದೆ. ಸಮಯಕ್ಕೆ ಸರಿಯಾಗಿ ಬಡ್ಡಿ ಪಾವತಿಸದಿದ್ದರೆ ಸಾಲಗಾರರ ಪಿತ್ತ ನೆತ್ತಿಗೇರಿ, ಹಣ ಪಡೆದವರ ಮನೆಯ ಹೆಣ್ಣು ಮಕ್ಕಳ ಮಾನ ಇವರ ಬಾಯಲ್ಲಿ ಲೀಲಾಜಾಲವಾಗಿ ಬೀದಿ ಹರಾಜಾಗುತ್ತದೆ. ಇವರ ಈ ದರ್ಪಕ್ಕೆ ಸಾಲ ತೆಗೆದುಕೊಂಡ ವ್ಯಕ್ತಿ ಕುಗ್ಗುವುದಷ್ಟೇ ಅಲ್ಲ ಆ ಮನೆಯ ಶಾಂತಿ ಕದಡಿ ಅನೇಕ ಸಾಮಾಜಿಕ ಕಲಹಗಳಿಗೆ ಮನಸ್ತಾಪಗಳಿಗೆ ಕಾರಣವಾಗಿ ನಾವು ನೋವುಗಳಿಗೆ ಕಾರಣವಾಗುತ್ತಿರುವುದು ಇಲ್ಲಿ ಸ್ಪಷ್ಟವಾಗಿ ಕಂಡುಕೊಂಡ ಅಂಶವಾಗಿದೆ.

**ಸುಲಭ ಗಳಿಕೆಯ ಹಣದ ದಾಹ:** ಈ ವಾರದ ಬಡ್ಡಿ ದಂಧೆಯೂ ಕೇವಲ ಕೆಲವು ಶ್ರೀಮಂತ ವ್ಯಕ್ತಿಗಳಿಂದ ಅಷ್ಟೇ ಅಲ್ಲ ತಮ್ಮ ದುಡಿಮೆಯಲ್ಲಿ ಅಲ್ಪ ಸ್ವಲ್ಪ ಕೂಡಿಟ್ಟು ಆರ್ಥಿಕ ಶಿಸ್ತು ಪಾಲಿಸಿದ ಕೆಲವು ಮಧ್ಯಮ ವರ್ಗದ ಜನರಿಂದಲೂ ನಡೆಯುತ್ತಿದೆ. ಇದಕ್ಕೆ ಮೂಲ ಕಾರಣವೇ ಇಂತಹ ಜನಗಳೇ ಅನ್ನಬಹುದು. ಇವರು ನೀಡುವ ಸಾಲಕ್ಕೆ ವಾರಕ್ಕೆ ಶೇ. 10 ಬಡ್ಡಿದರ ಆಗಿರುವುದರಿಂದ ಬಡ್ಡಿಯ ಭಾಗವಾಗಿಯೇ ಹತ್ತು ವಾರಕ್ಕೆ ಅಂದರೆ ಕೇವಲ ಎರಡೂವರೆ ತಿಂಗಳಿಗೆ ಇವರ ಮೂಲ ಹಣ ಮರುಪಾವತಿ ಆಗಿರುತ್ತದೆ. ಅದರ ನಂತರದ್ದು ಏನಾದರೂ ಇದ್ದರೆ ಶೋಷಣೆ ಮುಖಾಂತರ ವಸೂಲಿ ಮತ್ತು ಲಾಭ ಅಷ್ಟೇ.ಜಿಲ್ಲೆಯ ಅನೇಕ ಭಾಗಗಳಲ್ಲಿ ಜಾತಿ ಧರ್ಮ, ಲಿಂಗ ಸಮುದಾಯಕ್ಕೂ ಮೀರಿ ಈ ಬಡ್ಡಿ ದಂಧೆಯು ಬೆಳೆದು ನಿಂತಿರುವುದು ನೋಡಿದರೆ ಇದರ ವಿಸ್ತಾರ ಸುಲಭಕ್ಕೆ ದಕ್ಕುವಂತದ್ದಲ್ಲ, ಬಡ್ಡಿ ನಿಷೇಧವಾಗಿರುವ ಮುಸ್ಲಿಮ್ ಸಮುದಾಯದಲ್ಲಿಯೂ ಕೂಡ ಈ ಶೋಷಕರ ಹಾವಳಿ ವ್ಯಾಪಿಸಿದ್ದು ಈ ಹರಾಮಿ ಗಳಿಕೆಯ ಹಾದಿ ಬಿಟ್ಟುಬಿಡಿ ಎಂದು ಮಸೀದಿಯಲ್ಲಿ ಮೌಲ್ವಿಗಳು ಕೇಳಿಕೊಂಡರೂ ಕೂಡ ಕೆಲವರು ಮಸೀದಿಯಿಂದ ಹೊರಗೆ ಬಂದ ಮೇಲೆ ಅದೇ ದಾರಿ ತುಳಿಯುತ್ತಿದ್ದಾರೆ. ವಾರದ ಬಡ್ಡಿಗೆ ಸಾಲ ನೀಡುವವರು ಸುಲಭವಾಗಿ ಮತ್ತು ಅಲ್ಪಾವಧಿಯಲ್ಲೇ ಹೆಚ್ಚಿನ ಹಣ ಗಳಿಕೆಯ ಮೋಹಕ್ಕೆ ಬಲಿಯಾಗಿದ್ದಾರೆ ಎಂದು ಸಮುದಾಯದ ಗೆಳೆಯರೊಬ್ಬರು ವಿಷಾದ ವ್ಯಕ್ತಪಡಿಸುತ್ತಾರೆ. ಮಧ್ಯಮ ವರ್ಗಗಳ ಮೇಲಿನ ಈ ಸಂಕಟಕ್ಕೆ ಕಾರಣವಾಗಿರುವ ಮೈಕ್ರೋ ಫೈನಾನ್ಸ್ ಸಂಸ್ಥೆಗಳಿಗೆ ಸಮರ್ಥಿಸಿಕೊಳ್ಳಲು ತಮ್ಮದೇ ಆದ ಕಾನೂನಾತ್ಮಕ ಹಾದಿಗಳು, ಸಾಕಷ್ಟು ಮಟ್ಟಿಗೆ ಪ್ರಭುತ್ವಗಳ ಬೆಂಬಲವು ಇರುವುದು ಸ್ಪಷ್ಟವಾಗಿದೆ. ಆದರೆ ಕಾನೂನಿನ ಎಲ್ಲೆ ಮೀರಿರುವ ಖಾಸಗಿ ವ್ಯಕ್ತಿಗಳ ಅಪರಿಮಿತವಾದ ವೈಯಕ್ತಿಕ ಬಡ್ಡಿ ವ್ಯವಹಾರಕ್ಕೆ ಕಾನೂನಿನ ಅಂಕೆಯಿದ್ದರೂ ಇವರ ಶೋಷಣೆ ರಾಜಾರೋಷವಾಗಿ ಮುಂದುವರಿಯುತ್ತಿರುವುದು ಸಾಕಷ್ಟು ಅನುಮಾನಕ್ಕೆ ಕಾರಣವಾಗಿದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಬಡ್ಡಿ ವಿಧಿಸಿ ಸಾಲಗಾರರು ಅವಾಚ್ಯ ಕಬ್ಬಗಳಿಂದ ಶೋಷಣೆಗೊಳಪಡಿಸಿದರೂ, ಸಾಲ ತೆಗೆದುಕೊಂಡವರು ಪೊಲೀಸ್ ಠಾಣೆಯ ಮೆಟ್ಟಿಲೇರಲು ಅಂಜುತ್ತಾರೆ. ನಿಮಗೆ ಕಾನೂನು ಬೆಂಬಲ ಸಿಗುತ್ತದೆ ಮುಂದುವರಿಯಿರಿ ಶೋಷಣೆ ನಿಲ್ಲುತ್ತದೆ ಎಂದು ಹೇಳಿದರೆ, ಇದಕ್ಕೆ ಪ್ರತಿಕ್ರಿಯಿಸಿದ ಸಾಲ ಪಡೆದವರು 'ಸಾಲ ಪಡೆದುಕೊಂಡಿದ್ದೇವೆ ಕೊಟ್ಟ ಮಾತಿನಂತೆ ತೀರಿಸಿದರಾಯಿತು ಬಿಡಿ, ನಮ್ಮ ಕರ್ಮ' ಎಂದು ಅಂಜುತ್ತಾರೆ. ಜಿಲ್ಲಾ ಕೇಂದ್ರದಲ್ಲೇ ಇಷ್ಟು ಸಾವು ನೋವುಗಳಿಗೆ ಕಾರಣವಾಗಿ ಸಮಸ್ಯೆ ಇಷ್ಟು ಭೀಕರವಾಗಿರುವಾಗ ಪೊಲೀಸ್ ಮತ್ತು ಆಡಳಿತ ವಿಭಾಗ ಕಠಿಣ ಕ್ರಮ ಕೈಗೊಳ್ಳುವುದಿಲ್ಲವೇ ಎಂದು ಜನರಿಗೆ ಕೇಳಿದರೆ, ಸಾಲ ಕೊಟ್ಟವರು ಅದೆಲ್ಲ ಮ್ಯಾನೇಜ್ ಮಾಡದೆ ಇರುವಷ್ಟು ದಡ್ಡರೇ? ಎಂದು ಯುವ ಗೆಳೆಯರು ಮರು ಪ್ರಶ್ನಿಸುತ್ತಾರೆ. ಇಲ್ಲಿ ಸಾಲ ನೀಡಿದವರದಷ್ಟೇ ಅಲ್ಲ ದುಡ್ಡು ಸಿಗುತ್ತದೆ ಎಂಬ ಕಾರಣಕ್ಕೆ ಆರ್ಥಿಕ ಅಶಿಸ್ತನ್ನೇ ಮೈಗೂಡಿಸಿಕೊಂಡ ಸಾಮಾನ್ಯ ಜನರದ್ದು ಕೂಡ ಅಷ್ಟೇತಪ್ಪಿದೆ. ಆದರೆ ಪರಿಸ್ಥಿತಿ ಏನೇ ಇದ್ದರೂ ಪೊಲೀಸ್ ಮತ್ತು ಆಡಳಿತ ವಿಭಾಗ ತಮ್ಮ ಎಲ್ಲಾ ಮಿತಿಯನ್ನು ಬದಿಗಿಟ್ಟು ಜವಾಬ್ದಾರಿಯುತವಾಗಿ ನಡೆದುಕೊಳ್ಳುವ ಮೂಲಕ ಇಲ್ಲಿನ ಜನರ ನೆಮ್ಮದಿ ಮತ್ತು ಭವಿಷ್ಯವನ್ನು ಕಾಪಾಡಬೇಕಿದೆ.


# ಪೊಲೀಸರ ಲಾಠಿ ಏಟಿಗೆ ಬಲಿಯಾದ ವಕೀಲರು, ಲಾಲಾ ಲಜಪತ್ ರಾಯ್




ಇವತ್ತಿಗೆ ಸರಿಯಾಗಿ 96 ವರ್ಷಗಳ ಹಿಂದೆ ಅಂದರೇ, 17 ನವೆಂಬರ್ 1928 ರಂದು  ಸ್ವತಂತ್ರ ಹೋರಾಟಗಾರ, ವಕೀಲರಾಗಿದ್ದ ಲಾಲ ಲಜಪತ್ ರಾಯ್ ಅವರು ಪೊಲೀಸರ ಲಾಟಿಗೆ ಬಲಿಯಾದ ದಿನ, ಲಾಲಾ ಲಜಪತ್ ರಾಯ್, ಸಾಮಾನ್ಯವಾಗಿ "ಪಂಜಾಬ್‌ನ ಸಿಂಹ" ಎಂದು ಕರೆಯುತ್ತಾರೆ, ಅವರು ಪ್ರಮುಖ ಭಾರತೀಯ ರಾಷ್ಟ್ರೀಯತಾವಾದಿ ನಾಯಕ, ಸುಧಾರಕ ಮತ್ತು ಭಾರತೀಯ ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರಮುಖ ವ್ಯಕ್ತಿಯಾಗಿದ್ದರು. ಜನವರಿ 28, 1865 ರಂದು ಪಂಜಾಬ್‌ನ ಒಂದು ಸಣ್ಣ ಹಳ್ಳಿಯಲ್ಲಿ ಜನಿಸಿದ ರಾಯ್ ಅವರು ಪ್ರಮುಖ ರಾಜಕೀಯ ವ್ಯಕ್ತಿ ಮಾತ್ರವಲ್ಲದೆ ಬ್ರಿಟಿಷ್ ಭಾರತದ ಕಾನೂನು ಕ್ಷೇತ್ರಕ್ಕೆ ಗಣನೀಯ ಕೊಡುಗೆ ನೀಡಿದ ನುರಿತ ವಕೀಲರಾಗಿದ್ದರು.

ಲಾಲ ಲಜಪತ್ ರಾಯ್ ಅವರು ಕಾನೂನಿನಲ್ಲಿ ತಮ್ಮ ಶಿಕ್ಷಣವನ್ನು ಪೂರ್ಣಗೊಳಿಸಿದರು ಮತ್ತು 1886 ರಲ್ಲಿ ಲಾಹೋರ್ ಬಾರ್ ಅಸೋಸಿಯೇಷನ್‌ಗೆ ಕರೆಸಿಕೊಂಡರು. ಆಗ ಅವರ ಎನ್ರೊಲ್ಮೆಂಟ್ ನಂಬರ್, 166/1889 ಆಗಿ-ತ್ತು. ಅವರ ಕಾನೂನಿನಲ್ಲಿನ ತರಬೇತಿಯು ವಸಾಹತುಶಾಹಿ ಭಾರತದ ಕಾನೂನು ಕ್ಷೇತ್ರದ ಅಧ್ಯಯನ ಮಾಡಲು ಅಗತ್ಯವಾದ ಕೌಶಲ್ಯಗಳನ್ನು ಅವರಿಗೆ ಒದಗಿಸಿದ್ದು ಮಾತ್ರವಲ್ಲದೆ ದಬ್ಬಾಳಿಕೆಯ ಕಾನೂನು ಮತ್ತು ಸಾಮಾಜಿಕವನ್ನು ಸವಾಲು ಮಾಡುವ ಸಾಧನಗಳೊಂದಿಗೆ ಅವರನ್ನು ಸಜ್ಜುಗೊಳಿಸಿತು. ಪಂಜಾಬ್‌ನಲ್ಲಿ ವಕೀಲರಾಗಿ,ಲಾಲಾ ಲಜಪತ್ ರಾಯ್ ಅವರು ತಮ್ಮ ವಾಗ್ಮಿ ಕೌಶಲ್ಯ ಮತ್ತು ನ್ಯಾಯಕ್ಕಾಗಿ ಅವರ ಬದ್ಧತೆಗೆ ಶೀಘ್ರವಾಗಿ ಖ್ಯಾತಿಯನ್ನು ಪಡೆದರು. ಅವರು ಸಾಮಾನ್ಯವಾಗಿ ಸಾಮಾಜಿಕ ಸುಧಾರಣೆಯನ್ನು ಒಳಗೊಂಡಿರುವ ಪ್ರಕರಣಗಳನ್ನು ತೆಗೆದುಕೊಂಡರು, ಕೆಳ ಜಾತಿಗಳು ಮತ್ತು ಮಹಿಳೆಯರ ಹಕ್ಕುಗಳು ಸೇರಿದಂತೆ ಹಿಂದುಳಿದ ಗುಂಪುಗಳ ಹಕ್ಕುಗಳಿಗಾಗಿ ಪ್ರತಿಪಾದಿಸಿದರು. ಅವರ ವಕಾಲತ್ತು ನೈತಿಕತೆ ಮಾನವೀಯತೆಯಿಂದ ತುಂಬಿತ್ತು ,ಆ ಸಮಯದಲ್ಲಿ ಭಾರತೀಯ ಸಮಾಜದಲ್ಲಿ ಪ್ರಚಲಿತದಲ್ಲಿದ್ದ ಸಾಮಾಜಿಕ ಅನ್ಯಾಯಗಳನ್ನು ಎದುರಿಸಲು ಅವರು ನ್ಯಾಯಾಲಯ, ಕಾನೂನು ಮತ್ತು ವಕಲತ್ತು ವೇದಿಕೆಯನ್ನು ಬಳಸಿದರು.

ಅವರು ನಡೆಸಿದ ಅತ್ಯುತ್ತಮ ಪ್ರಕರಣಗಳನ್ನು ನೋಡುವುದಾದರೆ ,ವಿಶೇಷವಾಗಿ ನಾಗರಿಕ ಹಕ್ಕುಗಳು ಮತ್ತು ಸಾಮಾಜಿಕ ಸುಧಾರಣೆಗೆ ಸಂಬಂಧಿಸಿದಂತೆ ಲಜಪತ್ ರಾಯ್ & ಕಂ., ಲಾಹೋರ್ 1890 ರಲ್ಲಿ ಸ್ಥಾಪಿಸುದರು. ಲಾಹೋರ್ ಹೈಕೋರ್ಟ್, ಪಂಜಾಬ್ ಜಿಲ್ಲಾ ನ್ಯಾಯಾಲಯಗಳು ಮತ್ತು ಬೇಸಿಗೆ ಅವಧಿಗಳಲ್ಲಿ ಶಿಮ್ಲಾ ಹೈಕೋರ್ಟ್ ನಲ್ಲಿ ನ್ಯಾಯ ಸೇವೆ ಸಲ್ಲಿಸುತ್ತಿದ್ದರು. ಅವರು ಸಿವಿಲ್ ಕ್ರಿಮಿನಲ್ ಮತ್ತು ಫ್ಯಾಮಿಲಿ ಕೋರ್ಟ್ ಗಳನ್ನು ಹೆಚ್ಚಾಗಿ ನಡೆಸಿದ್ದಾರೆ ಜೊತೆಗೆ ನಾಗರಿಕ ಹಕ್ಕು




ಹಾಗೂ ಸಂವಿಧಾನಕ್ಕೆ ಸಂಬಂಧಿಸಿದ ಪ್ರಕರಣಗಳನ್ನು ನಡೆಸಿದ್ದಾರೆ.


## ಅದರಲ್ಲಿ ಪ್ರಮುಖ ಪ್ರಕರಣಗಳನ್ನು ನೋಡುವುದಾದರೆ.

1. ಬಾಲಗಂಗಾಧರ ತಿಲಕ್ ದೇಶದ್ರೋಹ ಪ್ರಕರಣ (1897) ಲಜಪತ್ ರಾಯ್ ಅವರು ಕೇಸರಿ ಪತ್ರಿಕೆಯಲ್ಲಿ ತಮ್ಮ ಲೇಖನಗಳಿಗಾಗಿ ದೇಶದ್ರೋಹದ ಆರೋಪಗಳ ವಿರುದ್ಧ ತಿಲಕ್ ಅವರನ್ನು ಸಮರ್ಥಿಸಿಕೊಂಡರು.
2. ಲಾಹೋರ್ ಪಿತೂರಿ ಪ್ರಕರಣ (1915)  ಅವರು ಬ್ರಿಟಿಷರ ವಿರುದ್ಧ ಸಂಚು ಹೂಡಿದ್ದಾರೆ ಎಂದು ಆರೋಪಿಸಲಾದ ಹಲವಾರು ಕ್ರಾಂತಿಕಾರಿಗಳನ್ನು ಸಮರ್ಥಿಸಿಕೊಂಡರು.
3. ರೌಲಟ್ ಆಕ್ಟ್ ಪ್ರತಿಭಟನೆ ಪ್ರಕರಣಗಳು (1919) ರೌಲತ್ ಆಕ್ಟ್ ಪ್ರತಿಭಟನೆಯ ಸಂದರ್ಭದಲ್ಲಿ ಬಂಧಿಸಲ್ಪಟ್ಟ ಪ್ರತಿಭಟನಾಕಾರರನ್ನು ಲಜಪತ್ ರಾಯ್ ಪ್ರತಿನಿಧಿಸಿದರು.
4. ಕೇದಾರ್ ನಾಥ್ ದಾಸ್ ವಿರುದ್ಧ ರಾಜ-ಚಕ್ರವರ್ತಿ (1924) ಅವರು ದೇಶದ್ರೋಹದ ಆರೋಪ ಹೊತ್ತಿರುವ ಕೇದಾರ್ ನಾಥ್ ದಾಸ್ ಅವರನ್ನು ಖುಲಾಸೆಗೊಳಿಸಲು ವಾದಿಸಿದರು.
5. ಸರ್ದಾ ಆಕ್ಟ್ ಕೇಸ್ (1925) ಲಜಪತ್ ರಾಯ್ ಅವರು ಭಾರತೀಯ ಮಹಿಳೆಯರ ಹಕ್ಕುಗಳನ್ನು ನಿರ್ಬಂಧಿಸಿದ ಸರ್ದಾ ಕಾಯ್ದೆಯನ್ನು ಪ್ರಶ್ನಿಸಿದರು.

ಸರ್ಕಾರದ ದಬ್ಬಾಳಿಕೆಯನ್ನು ಒಳಗೊಂಡ ಪ್ರಕರಣಗಳಲ್ಲಿ ರಾಯ್ ಆಗಾಗ್ಗೆ ಕಕ್ಷಿದಾರರನ್ನು ಪ್ರತಿನಿಧಿಸುತ್ತಿದ್ದರು. ಬ್ರಿಟಿಷರ ವಿರುದ್ಧದ ವಿವಿಧ ಚಳುವಳಿಗಳ ಸಂದರ್ಭದಲ್ಲಿ ಅವರ ಕಾನೂನು ಹೋರಾಟಗಳು ದೇಶದ್ರೋಹದ ಕಾನೂನುಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ಒಳಗೊಂಡಿತ್ತು, ಅಲ್ಲಿ ಅವರು ವಸಾಹತುಶಾಹಿ ಸರ್ಕಾರದ ವಿರುದ್ಧ ಭಿನ್ನಾಭಿಪ್ರಾಯವನ್ನು ಪ್ರಚೋದಿಸಿದ ಆರೋಪದ ವ್ಯಕ್ತಿಗಳನ್ನು ಸಮರ್ಥಿಸಿಕೊಂಡರು. ಯಾವಾಗಲೂ ಯಶಸ್ವಿಯಾಗದಿದ್ದರೂ, ಈ ಪ್ರಯತ್ನಗಳು ವಸಾಹತುಶಾಹಿ ಆಳ್ವಿಕೆಯ ಅನ್ಯಾಯಗಳ ಬಗ್ಗೆ ಸಾರ್ವಜನಿಕ ಜಾಗೃತಿ ಮೂಡಿಸಿದವು.

**ಲಾಹೋರ್ ಪಿತೂರಿ ಕೇಸ್ :** ರೈ ಜೊತೆಗಿನ ಪ್ರಮುಖ ಚಳುವಳಿಗಳಲ್ಲಿ ಒಂದಾದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಕ್ರಾಂತಿಕಾರಿ ರಾಷ್ಟ್ರೀಯತೆಯ ಕಡೆಗೆ ಅದರ ಬದಲಾವಣೆಯಾಗಿದೆ. ಲಾಹೋರ್ ಪಿತೂರಿ ಕೇಸ್ (1929) ಬ್ರಿಟಿಷ್ ಅಧಿಕಾರಿಗಳ ಹತ್ಯೆಯನ್ನು ಒಳಗೊಂಡಿತ್ತು ಮತ್ತು ಯುವ ರಾಷ್ಟ್ರೀಯತಾವಾದಿಗಳ ಅಲೆಯನ್ನು ಮುನ್ನೆಲೆಗೆ ತಂದಿತು. ರಾಯ್ ಅವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ತೊಡಗಿಸಿಕೊಂಡರು ಮತ್ತು ರಾಷ್ಟ್ರೀಯವಾದಿ ಕ್ರಮಗಳಿಗೆ ಅವರ ಕಾನೂನು ಬೆಂಬಲವು ಈ ಸಮಯದಲ್ಲಿ ಪ್ರಮುಖ ಕಾನೂನು ಮತ್ತು ರಾಜಕೀಯ ವ್ಯಕ್ತಿಯಾಗಿ ಅವರ ಪಾತ್ರವನ್ನು ಭದ್ರಪಡಿಸಿತು.

ಬ್ರಿಟಿಷ್ ಅಧಿಕಾರಿಗಳ ಕೈಯಲ್ಲಿ ಹಿಂಸಾತ್ಮಕ ದಮನದಿಂದ ಲಾಲಾ ಲಜಪತ್ ರಾಯ್ ಅವರ ಜೀವನವನ್ನು ಮೊಟಕುಗೊಳಿಸಲಾಯಿತು. ಅಕ್ಟೋಬರ್ 30, 1928 ರಂದು, ಅವರು ಭಾರತದಲ್ಲಿ ಸಾಂವಿಧಾನಿಕ ಸುಧಾರಣೆಗಳನ್ನು ಪರಿಶೀಲಿಸಲು ವಿನ್ಯಾಸಗೊಳಿಸಲಾದ ಲಾಹೋರ್‌ನಲ್ಲಿ ಸೈಮನ್ ಆಯೋಗದ ವಿರುದ್ಧ ಶಾಂತಿಯುತ ಪ್ರತಿಭಟನೆಯನ್ನು ನಡೆಸಿದರು. ಆಯೋಗವು ಯಾವುದೇ ಭಾರತೀಯ ಸದಸ್ಯರನ್ನು ಸೇ-ರಿಸಿಕೊಳ್ಳಲಿಲ್ಲ, ಇದು ವ್ಯಾಪಕ ಅಸಮಾಧಾನಕ್ಕೆ ಕಾರಣವಾಯಿತು. ಈ ಪ್ರತಿಭಟನೆಯ ಸಂದರ್ಭದಲ್ಲಿ, ಪೋಲೀಸ್ ಅಧಿಕಾರಿ ಜೇಮ್ಸ್ ಎ. ಸ್ಕಾಟ್ ಜನಸಮೂಹದ ಮೇಲೆ ಕ್ರೂರ ಲಾಠಿ ಚಾರ್ಜ್ ಮಾಡಲು ಆದೇಶಿಸಿದಾಗ ಲಜಪತ್ ರಾಯ್ ಗಾಯಗೊಂಡರು. ರಾಯ್ ತೀವ್ರವಾಗಿ ಗಾಯಗೊಂಡರು, ಇದರಿಂದ ಅವರು ಶೀಘ್ರದಲ್ಲೇ ನವೆಂಬರ್ 17, 1928 ರಂದು ನಿಧನರಾದರು.



**ವಿಜಯ ಅಮೃತರಾಜ್**
ವಕೀಲರು, ನಂದಿ ನಗರ (ಉತ್ತರ)
ಕೊಪ್ಪಳ - 583231
99458 73626

# ಕೊಪ್ಪಳ ತಾಲೂಕಿನ ಹುಲಿಗಿ ಗ್ರಾಮದ

# ಹುಟ್ಟು ಮತ್ತು ಅದರ ರೋಚಕ ಇತಿಹಾಸ



**‘ತುಂಗಭದ್ರೆ’ ಕರ್ನಾಟಕದ ನಾಲ್ಕು ಜಿಲ್ಲೆ ಮತ್ತು ಆಂಧ್ರದ ಕೆಲ ಜಿಲ್ಲೆಗಳ ಜೀವನಾಡಿಯಾಗಿದೆ. ‘ತುಂಗಾ’ ಮತ್ತು ‘ಭದ್ರೆ’ ಎರಡೂ ನದಿಗಳು ಸಮ್ಮಿಲನವಾಗಿ ಹರಿದು ಬರುತ್ತಿರುವ ಜೀವನದಿಗೆ ಅಡ್ಡಲಾಗಿ ಕಟ್ಟಿರುವ ಈ ಅಣೆಕಟ್ಟಿನಿಂದ ಎಷ್ಟೋ ರೈತರ ಬದುಕಿಗೆ ಉಸಿರಾಗಿದೆ. ಅದರ ಜೊತೆಗೆ ಸುತ್ತಮುತ್ತಲಿನ ಅನೇಕ ಕಾರ್ಖಾನೆಗಳಿಗೆ ನೀರಿನ ಪೂರೈಕೆಯಾಗುತ್ತಾ ಸಾವಿರಾರು ಕಾರ್ಮಿಕರಿಗೆ ಬದುಕಾಗಿದೆ. ಇಂತಹ ಮಹತ್ವ ಹೊಂದಿರುವ ಅಣೆಕಟ್ಟಿನ ಸುತ್ತಮುತ್ತಲಿನ ಗ್ರಾಮಗಳು, ರೈಲ್ವೆ ನಿಲ್ದಾಣದ ನಿರ್ಮಾಣದ ಕುರಿತು ಕೆಲವು ರೋಚಕ ಸಂಗತಿಗಳನ್ನು ತಿಳಿದುಕೊಳ್ಳುವುದು ಅತ್ಯಂತ ಮಹತ್ವದ ಸಂಗತಿಯಾಗಿದೆ.**

**ಹುಲಿಗಿ:-**
ಕೊಪ್ಪಳ ತಾಲೂಕಿನ ಹುಲಿಗಿ ಗ್ರಾಮವು ಶಕ್ತಿಕೇಂದ್ರ. ಪ್ರಾಚೀನ ಕಾಲದಲ್ಲಿ ಇದೊಂದು ಬಹುದೊಡ್ಡ ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರವಾಗಿತ್ತು. 10-11ನೇ ಶತಮಾನಕ್ಕೆ ಮೊದಲೇ ಇದೊಂದು ಬಹುದೊಡ್ಡ ಐತಿಹಾಸಿಕ ಕೇಂದ್ರವಾಗಿತ್ತೆಂದು ಇಲ್ಲಿನ ಶಾಸನಗಳಿಂದ ತಿಳಿದುಬರುತ್ತದೆ. ಇದು ನಾಡಿನ ತುಂಬೆಲ್ಲಾ ಹೆಸರುವಾಸಿಯಾದ ಗ್ರಾಮ ಎಂದರೂ ನಡಿಯುತ್ತೆ. ಏಕೆಂದರೆ ಇಲ್ಲಿ ನಡೆಯುವ ಹುಲಿಗೆಮ್ಮ ದೇವಿಯ ಜಾತ್ರೆ ಬಹು ಪ್ರಸಿದ್ಧಿಯಾಗಿದೆ. ಈ ಜಾತ್ರೆಗೆ ನಾಡಿನ ಜನತೆಯಷ್ಟೇ ಅಲ್ಲ ಅಕ್ಕ-ಪಕ್ಕದ ರಾಜ್ಯಗಳಾದ ಆಂಧ್ರ, ತೆಲಂಗಾಣ, ಮಹಾರಾಷ್ಟ್ರ, ಗೋವಾ ಮುಂತಾದ ರಾಜ್ಯಗಳಿಂದಲೂ ಭಕ್ತರು ಬಂದು ಹೋಗುವ ಪುಣ್ಯಕ್ಷೇತ್ರವಿದು. ಈ ಗ್ರಾಮಕ್ಕೆ ಎಷ್ಟು ಇತಿಹಾಸವಿದೆಯೋ; ಇಲ್ಲಿ ನಡೆಯುವ ಹುಲಿಗಿ ಜಾತ್ರೆಗೂ ಸಹ ಅಷ್ಟೇ ಬಹುದೊಡ್ಡ ಚ-ರಿತ್ರಯಿದೆ. ಜನಪದರು ಹುಲಗಿ, ಹುಲಿಗಿ, ಹುಲಿಗೆಮ್ಮ, ಹುಲಿಗೆರಮ್ಮ ಎಂಬ ಮುಂತಾದ ಹೆಸರುಗಳಿಂದ ಈ ಗ್ರಾಮವನ್ನು ಮತ್ತು ಈ ಗ್ರಾಮದ ದೇವತೆಯನ್ನು ಕರೆಯುತ್ತಾರೆ. ಈ ಗ್ರಾಮದ ಹೆಸರಿನ ಮೇಲೆ ಇಲ್ಲಿ ನೆಲೆಸಿರುವ ದೇವತೆಗೆ ‘ಹುಲಿಗೆಮ್ಮ’ ಎಂಬ ಹೆಸ-ರಿನಿಂದ ಕರೆಯಲಾಯಿತೋ ಅಥವಾ ಇಲ್ಲಿ ನೆಲೆಸಿರು ದೇವತೆಯ ಹೆಸರಿನ ಮೇಲೆ ಈ ಗ್ರಾಮಕ್ಕೆ ‘ಹುಲಗಿ’ ಎಂಬ ಗ್ರಾಮನಾಮ ಬಂತೋ ಎಂಬ ಮಾಹಿತಿ ಲಭ್ಯವಾಗುವುದಿಲ್ಲಾ. ಆದರೂ 10ನೇ ಶತಮಾನದ ಶಾಸನಗಳಲ್ಲಿ ಈ ಗ್ರಾಮವನ್ನು ‘ಪುಲಗಿ’(ಹುಲಗಿ) ಎಂತಲೂ ಉಲ್ಲೇಖಿಸಲಾಗಿದೆ. ಅಂದರೆ ಈ ಕಾಲಕ್ಕಿಂತಲೂ ಮೊದಲೇ ಈ ಗ್ರಾಮ ಇತ್ತೆಂಬುದು ತಿಳಿದುಬರುತ್ತದೆ. ಅದಕ್ಕಿಂತ ಮುಖ್ಯವಾಗಿ ರಾಮಾಯಣ ಕಾಲದಲ್ಲಿ ಉಲ್ಲೇಖಿತ ವಾನರ ರಾಜ್ಯ ‘ಕಿಷ್ಕಿಂದೆ’ ಪ್ರದೇಶದಲ್ಲಿ ಈ ಹುಲಗಿ ಗ್ರಾಮ ಇತ್ತೆಂದು ಇದೇ ಗ್ರಾಮದಲ್ಲಿ ದೊರೆತ ಶಾಸನದಿಂದ ತಿಳಿದುಬರುತ್ತದೆ. ಆ ಮಾತಿನಲ್ಲಿ ಗಮನಿಸಿದರೆ ಈ ಗ್ರಾಮದ ಚರಿತ್ರೆ ಕ್ರಿ.ಪೂ ಸುಮಾರು ನಾಲ್ಕೈದು ಸಾವಿರ ವರ್ಷಗಳ ಹಿಂದೆ ಹೋಗುತ್ತದೆ. ಇದರ ಜೊತೆಗೆ ಇಲ್ಲಿ ದೊರೆತ ಶಾಸನಗಳು, ಪ್ರಾಚೀನ ದೇವಸ್ಥಾನಗಳು ಮತ್ತು ಮೂರ್ತಿ-ಶಿಲ್ಪಗಳು ಈ ಗ್ರಾಮದ ಚರಿತ್ರೆಯ ಮೇಲೆ ಇನ್ನಷ್ಟು ಬೆಳಕು ಚೆಲ್ಲುತ್ತವೆ.

ಈ ಗ್ರಾಮದಲ್ಲಿ ಬಹುಪ್ರಾಚೀನ ಮತ್ತು ಪ್ರಸಿದ್ಧಿಯಾದ ಹುಲಿಗೆಮ್ಮ ಎಂಬ ಹೆಣ್ಣು ದೇವರ ದೇವಾಲಯವಿದೆ. ಅದರ ಹತ್ತಿರದಲ್ಲೆ ಸೋಮೇಶ್ವರ ದೇವಸ್ಥಾನವಿದೆ. ಅದರ ಸುತ್ತ-ಮುತ್ತಲಿನಲ್ಲಿ ನಾಲ್ಕು ಈಶ್ವರ ದೇವಾಲಯಗಳಿವೆ. ಹೀಗೆ ಒಟ್ಟು ಐದು ಶೈವ ದೇವಾಲಯಗಳಿರುವ ಈ ದೇವಾಲಯ ಸಮುಖ್ಯವನ್ನು ಪಂಚಲಿಂಗ ದೇವಾಲಯಗಳು ಎಂದು ಕರೆಯುತ್ತಾರೆ. ಸೋಮೇಶ್ವರ ದೇವಸ್ಥಾನ ಮಾತ್ರ ಉತ್ತಮ ಸ್ಥಿತಿಯಲ್ಲಿದ್ದು ದೊಡ್ಡ ಪ್ರಮಾಣದಲ್ಲಿದೆ. ಅವುಗಳಲ್ಲಿ ಮೂರು ದೇವಸ್ಥಾನಗಳ ಹೆಸರುಗಳು ಇಂದು ಬದಲಾವಣೆಯಾಗಿವೆ. ಒಂದಕ್ಕೆ ಗಣಪತಿ, ಮತ್ತೊಂದಕ್ಕೆ ಪಾರ್ವತಿ, ಇನ್ನೊಂದಕ್ಕೆ ಸುಬ್ರಮಣ್ಯ ದೇವಸ್ಥಾನ ಎಂದು ಕರೆಯುತ್ತಾರೆ. ಸ್ವಲ್ಪ ದೂರದಲ್ಲೇ ಇರುವ ಇನ್ನೊಂದು ದೇವಾಲಯ ಪೂರ್ಣ ಪ್ರಮಾಣದಲ್ಲಿ ನಾಶವಾಗಿದೆ. ದೇವಾಲಯದ ಒಳ ಪ್ರವೇಶಿಸಲೂ ಆಗದಿರುವುದರಿಂದ ಅದಕ್ಕೆ ಪ್ರವೇಶ ನಿಷೇಧವಿದೆ. ಹೀಗೆ ಒಟ್ಟು ಐದು ಶೈವ ದೇವಾಲಯಗಳ ಸಮೂಹವಿದು. ಹಾಗೆಯೇ ಈ ಗ್ರಾಮದಲ್ಲಿ ಮಾರುತಿ ಎಂಬ ಪ್ರಾಚೀನ ದೇವಸ್ಥಾನವಿದೆ. ಅದರ ಬಗ್ಗೆ ಹೆಚ್ಚಿನ ಇತಿಹಾಸ ತಿಳಿದುಬರುವುದಿಲ್ಲ. ಉಳಿದಂತೆ ಬಿದ್ದು ಹೋಗಿರುವ ಒಂದು ಬ್ರಹ್ಮಗುಡಿ ಮತ್ತು ಕ್ರಿ.ಶ. ಸುಮಾರು 1807ರಲ್ಲಿ ನಿರ್ಮಾಣವಾಯಿತೆಂದು ಹೇಳಲಾಗುವ ಪಾರ್ಶ್ವನಾಥ ಬಸದಿ ಇದೆ. ಈ ಬಸದಿ ಸುಸ್ಥಿತಿಯಲ್ಲಿದ್ದು ಇಂದು ಪೂಜಿಸಲ್ಪಡುತ್ತಿದೆ. ಉಳಿದಂತೆ ಯಾವುದೇ ಪ್ರಾಚೀನ ಕುರುಹುಗಳು ಈ ಗ್ರಾಮದಲ್ಲಿ ಲಭ್ಯವಿಲ್ಲ. ಈ ಗ್ರಾಮದಲ್ಲಿ ಇದುವರೆಗೆ ಮೂರು ಶಾಸನಗಳು ಪತ್ತೆಯಾಗಿವೆ. ಅವುಗಳಲ್ಲಿ ಒಂದು ಸೋಮೇಶ್ವರ ದೇವಸ್ಥಾನದಲ್ಲಿರುವ ಕ್ರಿ.ಶ 1088ರ ಶಾಸನ ಸ್ಪಷ್ಟವಾಗಿದ್ದು ಓದಲು ಬರುತ್ತಿದೆ. ಉಳಿದೆರಡು ಶಾಸನಗಳು ಒಂದೆರಡು ಸಾಲಿನವುಗಳಾಗಿದ್ದು ಅಸ್ಪಷ್ಟವಾಗಿರುವ ಕಾರಣಕ್ಕಾಗಿ ಅವುಗಳಿಂದ ಯಾವುದೇ ಮಾಹಿತಿ ದೊರೆಯುವುದಿಲ್ಲ.

**ಡಾ. ಸಿದ್ದಲಿಂಗಪ್ಪ ಕೊಟ್ನೆಕಲ್**
ಕನ್ನಡ ಉಪನ್ಯಾಸಕರು, ‘ಕನಸು ನಿಲಯ’
ಮಹಾಂತಯ್ಯನಮಠ ಶಾಲೆ ಎದುರಿಗೆ ಬಿ.ಟಿ.
ಪಾಟೀಲ ನಗರ, ಕೊಪ್ಪಳ-583231
ಮೊ.ಸಂ: 9448570340






ಕ್ರಿ.ಶ. 1088ರ ಕಾಲದ ಈ ಶಾಸನವು ಆರನೇ ವಿಕ್ರಮಾದಿತ್ಯನ ಆಳ್ವಿಕೆಯ ಕಾಲದ್ದಾಗಿದೆ. ಕಾಮಕಾಯನ ಗೋತ್ರದ ನಾರಾಯಣ ಭಟ್ಟೋಪಾಧ್ಯಯನ ಮಗ ಚೌವೇದಿಭಟ್ಟನು ಪುಲಗಿ(ಹುಲಗಿ) ಎಂಬ ಪುರವನ್ನು ವಿಕ್ರಮಾದಿತ್ಯನಿಂದ ಪಡೆದು ತುಂಗಾಭದ್ರ ನದಿಯಿಂದ ಸೀಳುನಾಲೆಯೊಂದನ್ನು ತಂದಂತೆ ಹೇಳಿದೆ. ಇವನ ಪತ್ನಿ ಅಚ್ಚಿಕಬ್ಬೆ ಇದ್ದಳು. ಇವರಿಗೆ ನಾರಣಭಟ್ಟ, ದ್ರೋಣಭಟ್ಟ, ಸೋಮನಾಥ, ಮಾರಯ್ಯಭಟ್ಟ ಮತ್ತು ರುದ್ರಾದಿತ್ಯ ಎಂಬ ಐವರು ಮಕ್ಕಳಿದ್ದರು. ಅವರಲ್ಲಿ ಸೋಮನಾಥನು ರುದ್ರ ಸದ್ಮವನ್ನು(ಶಿವದೇವಾಲಯ) ಮಾಡಿಸಿದನೆಂದು ತಿಳಿಸುತ್ತದೆ. ಈ ಊರಿನ ಪೂರ್ವಕ್ಕೆ ರಿಷ್ಯಮೂಕಾಚಲ, ದಕ್ಷಿಣಕ್ಕೆ ಗಂಧಮಾಧವ, ಪಶ್ಚಿಮಕ್ಕೆ ತ್ರಿಕೂಟ, ಉತ್ತರಕ್ಕೆ ಕಿಷ್ಕಿಂದೆ ಪರ್ವತಗಳಿದ್ದವು. ಇವುಗಳ ಮಧ್ಯೆ ಇರುವ ಸುಂದರ ಪ್ರದೇಶದಲ್ಲಿ ಪುಲಿಗೆಯೂ-ರಿನ ಒಡೆಯನಾದ ಸೋಮನಾಥನ ದೇವಾಲಯವನ್ನು ಮಾಡಿಸಿದನೆಂದಿದೆ. ಈ ಸೋಮನಾಥನ ಪತ್ನಿಯಾಗಿ ಮಂಚಿಕಬ್ಬೆ ಇದ್ದಳು. ಈ ದಂಪತಿಗಳಿಬ್ಬರೂ ಕೂಡಿ ತಾವು ಪ್ರತಿಷ್ಠಾಪನೆ ಮಾಡಿಸಿದ ಸೋಮೇಶ್ವರ ದೇವರಿಗೆ ಊರಿನ ಪೂರ್ವಕ್ಕೆ ಗುಯ್ಯಲ ತೋಟ, ಪರಿವೀರ ತೋಟವನ್ನು ಚತುಸ್ಸೀಮಾ ಸಮೇತವಾಗಿ ನೀಡುತ್ತಾರೆ. ಇದಲ್ಲದೆ ಮನೆಗಳನ್ನು ಭೃತ್ಯ ದಾಸಿವರ್ಗ ಸಹಿತವಾಗಿ ಧಾರಾಪೂರ್ವಕವಾಗಿ ನೀಡುತ್ತಾನೆಂದು ಈ ಶಾಸನದಲ್ಲಿ ವಿವ-ರಿಸಿದೆ.

ಈ ಮೇಲಿನ ಚಾರಿತ್ರಿಕ ಕುರುಹುಗಳನ್ನು ಗಮನಿಸಿದಾಗ ಕ್ರಿ.ಶ 10ನೇ ಶತಮಾನದಲ್ಲೇ ಈ ಗ್ರಾಮಕ್ಕೆ ಪುಲಗಿ(ಹುಲಗಿ) ಎಂದು ಕರೆಯಲಾಗುತ್ತಿತ್ತೆಂದು ಸ್ಪಷ್ಟವಾಗಿ ತಿಳಿದುಬರುತ್ತಿದೆ. ಇಲ್ಲಿ ಮತೊಂದು ಗಮನಿಸಬೇಕಾದ ಅಂಶವೆಂದರೆ ಈ ಗ್ರಾಮವನ್ನು ‘ಪುರ’ ಎಂದು ಉಲ್ಲೇಖಿಸಿರುವುದು. ಬಹುಶಃ ಆ ಕಾಲದಲ್ಲೇ ಇದು ಬಹುದೊಡ್ಡ ನಗರವಾಗಿರಬೇಕು. ಯಾಕೆಂದರೆ ನಗರಗಳಿಗೆ ಮಾತ್ರ ‘ಪುರ’ ಎಂದು ಕರೆಯಲಾಗುತ್ತಿತ್ತು ಎನ್ನುವುದು ಚರಿತ್ರೆಯಿಂದ ತಿಳಿದುಬರುತ್ತದೆ. ಹೀಗಾಗಿ ಪ್ರಾಚೀನ ಕಾಲದಲ್ಲಿ ಈ ಹುಲಿಗಿ ಗ್ರಾಮವು ಬಹುದೊಡ್ಡ ಪಟ್ಟಣವಾಗಿತ್ತೆಂದು ತಿಳಿದುಬರುತ್ತದೆ. ಹಿಂದೆ ಇದು ಜೈನ, ವೈಷ್ಣವ, ಶೈವ-ವೀರಶೈವ ಧರ್ಮಗಳ ಆಡಂಬೋಲವಾಗಿತ್ತು ಎನ್ನುವುದು ಇಲ್ಲಿನ ಕುರುಹುಗಳಿಂದ ಮಾಹಿತಿ ದೊರೆಯುತ್ತದೆ.



# ಟ್ರಂಪ್ ಗೆಲುವು ಭಾರತಕ್ಕೆ ಎಲಾನ್ ಮಸ್ಕ್ ಹಾದಿ ಸುಗಮವಾಗುತ್ತಾ?




ಅಮೆರಿಕಾ ಅಧ್ಯಕ್ಷೀಯ ಚುನಾವಣೆ ಗೆದ್ದ ಎಲಾನ್ ಮಸ್ಕ್ ಒಡೆತನದ ಸ್ಟಾರ್ ಲಿಂಕ್ ಸಂಸ್ಥೆ, ಭಾರತದಲ್ಲಿ ಬ್ರಾಡ್ ಬ್ಯಾಂಡ್ ಸೇವೆ ಸಲ್ಲಿಸಲು ಅರ್ಜಿಯನ್ನು ಅಧಿಕೃತವಾಗಿ ಸಲ್ಲಿಸಿದೆ. ಅಮೆರಿಕಾ ಮೂಲದ ಈ ಸಂಸ್ಥೆಗೆ ಸೇವೆ ಒದಗಿಸಲು ಅನುಮತಿಯನ್ನು ಕೊಟ್ಟರೆ, ದೇಶದ ಸಾರ್ವಭೌಮತ್ವಕ್ಕೆ ಅಡ್ಡಿಯಾಗಲಿದೆ ಎಂದು ಚಿಂತಕರ ಚಾವಡಿ ಎಚ್ಚರಿಕೆಯನ್ನು ನೀಡಿದೆ. ತಮ್ಮ ಪರಮಾಪ್ತ ಡೊನಾಲ್ಡ್ ಟ್ರಂಪ್ ಅಮೆರಿಕಾ ಅಧ್ಯಕ್ಷೀಯ ಚುನಾವಣೆಯಲ್ಲಿ ಗೆದ್ದ ಬೆನ್ನಲ್ಲೇ, ಬಿಲಿನಿಯೇರ್ ಎಲಾನ್ ಮಸ್ಕ್ ತಮ್ಮ ಬಹುಕೋಟಿ ಉದ್ಯಮವನ್ನು ವಿಶ್ವದಾದ್ಯಂತ ವಿಸ್ತರಿಸಲು ಮುಂದಾಗಿದ್ದಾರೆ. ಈಗಾಗಲೇ, ಉಕ್ರೇನ್ ದೇಶಕ್ಕೆ ಸೇವೆಯನ್ನು ವಿಸ್ತರಿಸುವುದಾಗಿ ಹೇಳಿರುವ ಎಲಾನ್ ಮಸ್ಕ್, ಭಾರತಕ್ಕೆ ಎಂಟ್ರಿಯಾಗಲು ಪ್ರಯತ್ನಿಸುತ್ತಿದ್ದಾರೆ.

ಭಾರತದಲ್ಲಿ ಉಪಗ್ರಹ ಆಧಾರಿತ ಬ್ರಾಡ್ ಬ್ಯಾಂಡ್ ಅಂತರ್ಜಾಲ ಸೇವೆ ಒದಗಿಸಲು ಅನುಮತಿ ಕೇಳಿರುವ ಎಲಾನ್ ಮಸ್ಕ್, ಅಧಿಕೃತವಾಗಿ ಮನವಿಯನ್ನು ಸಲ್ಲಿಸಿದ್ದಾರೆ. ಆ ಮೂಲಕ, ಈಗಾಗಲೇ ಇಂಟರ್ನೆಟ್ ಸೇವೆಯನ್ನು ಒದಗಿಸುತ್ತಿರುವ ಭಾರತೀಯ ಕಂಪೆನಿಗಳ ನಿದ್ದೆಗೆಡಿಸಿದ್ದಾರೆ. ಸ್ಟಾರ್ ಲಿಂಕ್ ಸೇವೆಯನ್ನು ಭಾರತದಲ್ಲಿ ಒದಗಿಸಲು ಇಂಟರ್ನೆಟ್ ಚಿಂತಕರ ಚಾವಡಿ ಭಾರೀ ವಿರೋಧವನ್ನು ವ್ಯಕ್ತ ಪಡಿಸಿದೆ. ಹಲವು ದೇಶಗಳು ಈ ಸೇವೆಯಿಂದ ತಮ್ಮ ಸಾರ್ವಭೌಮತ್ವಕ್ಕೆ ತೊಂದರೆಯನ್ನು ತಂದುಕೊಂಡಿದೆ ಎನ್ನುವ ಎಚ್ಚರಿಕೆಯನ್ನು ನೀಡಿದೆ.
ಭಾರತದಲ್ಲಿ ಸೇವೆ ಆರಂಭಿಸಲು ಕೇಂದ್ರ ಸರ್ಕಾರದಿಂದ ಕ್ಲಿಯರೆನ್ಸ್ ಅನ್ನು ಪಡೆಯಬೇಕಾಗುತ್ತದೆ. ಅದಕ್ಕೆ ಸಂಬಂಧಿಸಿದಂತೆ, ಟೆಲಿಕಾಂ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಜೊತೆ, ಎಲಾನ್ ಮಸ್ಕ್ ಸಂಸ್ಥೆಯ ಅಧಿಕಾರಿಗಳು ಸಂಪರ್ಕದಲ್ಲಿದ್ದಾರೆ ಎಂದು ಹೇಳಲಾಗುತ್ತಿದೆ.

2021ರಲ್ಲಿ ಭಾರತಕ್ಕೆ ಎಂಟ್ರಿ ಕೊಡಲು ಸ್ಟಾರ್ ಲಿಂಕ್ ಪ್ರಯತ್ನವನ್ನು ಮಾಡಿ, ಆರಂಭಿಕ ಹಂತದಲ್ಲಿ ಐದು ಸಾವಿರಕ್ಕೂ ಹೆಚ್ಚು ಗ್ರಾಹಕರನ್ನು ಪಡೆಯುವಲ್ಲೂ ಯಶಸ್ವಿಯಾಗಿತ್ತು. ಆದರೆ, ಭಾರತ ಸರ್ಕಾರದ ಅಧಿಕೃತ ಲೈಸೆನ್ಸ್ ಇಲ್ಲದೆ, ಸೇವೆ ಆರಂಭಿಸುವುದು ಬೇಡ ಎನ್ನುವುದಕ್ಕಾಗಿ, ಹಿಂದೇಟು ಹಾಕಿತ್ತು. ಎಲಾನ್ ಮಸ್ಕ್ ಒಡೆತನದ ಸ್ಟಾರ್ ಲಿಂಕ್ ಅನ್ನು " ಕುರಿಯ ಉಡುಪಿನಲ್ಲಿರುವ ತೋಳ " ಎಂದು ಕೂಟನೀತಿ ಪ್ರತಿಷ್ಠಾನದ ಚಿಂತಕರು ಅಭಿಪ್ರಾಯ ಪಟ್ಟಿದ್ದಾರೆ.
ಎಲಾನ್ ಮಸ್ಕ್ ಅವರು ಟ್ರಂಪ್ ಅವರ ಆಪ್ತ ಮತ್ತು ಈ ಸಂಸ್ಥೆಯು, ಅಮೆರಿಕಾದ ಗುಪ್ತಚರ ಮತ್ತು ರಕ್ಷಣಾ ಇಲಾಖೆಯ ಜೊತೆಗೆ ನಿಕಟ ಸಂಬಂಧವನ್ನು ಹೊಂದಿದೆ ಎನ್ನುವ ಎಚ್ಚರಿಕೆಯನ್ನು ಚಿಂತಕರು ನೀಡಿದ್ದಾರೆ.

ಸ್ಟಾರ್ ಲಿಂಕ್ ಸಂಸ್ಥೆಯ ಉಪಗ್ರಹ ಸಮೂಹಗಳು ಹೊಸ ಸ್ವರೂಪದಲ್ಲಿದೆ. ಅಲ್ಲದೇ, ಅಮೆರಿಕದೊಂದಿಗೆ ಹಲವು ಗೌಪ್ಯ ಒಪ್ಪಂದವನ್ನೂ ಮಾಡಿಕೊಂಡಿದೆ. ಜಗತ್ತಿನ ಎಲ್ಲಾ ಗ್ರಾಹಕ-ರಿಗೆ ಯಾವುದೇ ನಿಯಂತ್ರಣವಿಲ್ಲದೇ ಸೇವೆ ಒದಗಿಸುವ ಸಂಸ್ಥೆ ಅದಾಗಿದೆ. ಇದು ಭಾರತದ ಸಾರ್ವಭೌಮತ್ವಕ್ಕೆ ತೊಂದರೆಯಾಗಲಿದೆ ಎಂದು ಚಿಂತಕರು ಎಚ್ಚರಿಸಿದ್ದಾರೆ. ಬ್ರೆಜಿಲ್, ಇರಾನ್ ಮುಂತಾದ ದೇಶಗಳ ಸಾರ್ವಭೌಮತ್ವಕ್ಕೆ ಈಗಾಗಲೇ ಸ್ಟಾರ್ ಲಿಂಕ್ ಈಗಾಗಲೇ ಸೆಡ್ಡನ್ನು ಹೊಡೆದಿದೆ. ಎಲಾನ್ ಮಸ್ಕ್ ಉದ್ಯಮಿ ಹೇಗೆಯೋ ಅದೇ ರೀತಿ ರಾಜಕಾರಣಿ ಕೂಡಾ. ಮುಂದಿನ ದಿನಗಳಲ್ಲಿ ಅವರ ಪ್ರಭಾವ ಹೆಚ್ಚಾಗಲಿದೆ. ಹಾಗಾಗಿ, ಯಾವ ಕಾರಣಕ್ಕಾಗಿಯೂ ಅವರ ಸ್ಟಾರ್ ಲಿಂಕ್ ಸಂಸ್ಥೆಗೆ ಲೈಸೆನ್ಸ್ ಅನ್ನು ನೀಡಬಾರದು ಎಂದು ಹಲವು ಚಿಂತಕರು ಅಭಿಪ್ರಾಯ ಪಟ್ಟಿದ್ದಾರೆ. ಟ್ರಾಯ್ (Telecom Regulatory Authority of India) ಇತ್ತೀಚೆಗೆ ನಡೆಸಿದ್ದ ಸಭೆಯಲ್ಲಿ, ಸ್ಟಾರ್ ಲಿಂಕ್, ಭಾರತಕ್ಕೆ ಎಂಟ್ರಿ ಕೊಟ್ಟರೆ, ಈಗಿನ ಸೇವಾದಾರರು ಎದುರಿಸಬೇಕಾದ ಸಮಸ್ಯೆ/ ಚಾಲೆಂಜ್ ಬಗ್ಗೆ ಚರ್ಚಿಸಲಾಗಿದೆ. ಗ್ರಾಮೀಣ ಪ್ರದೇಶದ ಗ್ರಾಹಕರನ್ನು ಸೆಳೆಯುವುದು ಸ್ಟಾರ್ ಲಿಂಕ್ ಸಂಸ್ಥೆಯ ಆರಂಭಿಕ ಯೋಜನೆ ಎಂದು ಹೇಳಲಾಗುತ್ತಿದೆ.

# ಕೃತಕ ಬುದ್ಧಿಮತ್ತೆ!




## ವರವೋ ಶಾಪವೋ?

**ಕೃತಕ ಬುದ್ಧಿಮತ್ತೆ (ಎಐ)ಯಿಂದ ಉದ್ಯೋಗಗಳಿಗೆ ಕಂಟಕವೋ, ವರದಾನವೋ ಎಂಬ ಚರ್ಚೆ ನಡೆಯುತ್ತಲೇ ಇದೆ. ಅಮೆರಿಕ ಮತ್ತು ಯೂರೋಪ್‌ನಲ್ಲಿ ಶೇ. 25ರಷ್ಟು ಉದ್ಯೋಗಿಗಳ ಕೆಲಸವನ್ನು ಎಐ ಬದಲಿಸಬಹುದು. ಎಐ ಬಳಕೆಯಿಂದ ಜಾಗತಿಕವಾಗಿ ಉತ್ಪಾದಿಸುವ ಸರಕು ಮತ್ತು ಸೇವೆಗಳ ಒಟ್ಟು ವಾರ್ಷಿಕ ಮೌಲ್ಯ ಶೇ. 7ರಷ್ಟು ವೃದ್ಧಿಯಾಗಲಿದೆ ಎಂದು ವರದಿಯೊಂದು ಹೇಳಿದೆ. "ಎಐನಿಂದ ಉದ್ಯೋಗಾವಕಾಶಗಳು ಕುಸಿಯುವುದಿಲ್ಲ. ಹೊಸ ಅವಕಾಶಗಳು ಕೌಶಲಗಳನ್ನು ಸೃಷ್ಟಿಸುತ್ತವೆ. ಕಂಪ್ಯೂಟರ್ ಬಂದಾಗಲೂ ಇಂಥದ್ದೆ ಆತಂಕವಿತ್ತು. ಆದರೆ ಕಂಪ್ಯೂಟರ್‌ನಿಂದ ಮನುಷ್ಯನ ಬದುಕು ಸ್ಮಾರ್ಟ್ ಆಯಿತು. ಎಐ ಬಗ್ಗೆ ಆತಂಕ ಬೇಡ. ಉದ್ಯೋಗ ಮಾರುಕಟ್ಟೆಯನ್ನು ಸಂಪೂರ್ಣವಾಗಿ ಎಐ ಆಕ್ರಮಿಸಿಕೊಳ್ಳಲು ಸಾಧ್ಯವಿಲ್ಲ. ಎಐ ನಿಭಾಯಿಸಲು ಮನುಷ್ಯ ಬೇಕೇ ಬೇಕು," ಎನ್ನುವುದು ಕೆಲವರ ವಾದ. ಆದರೆ, ಎಐ'ನಿಂದ ಹೊಸ ಬಗೆಯ ಉದ್ಯೋಗಾವಕಾಶಗಳು ಸೃಷ್ಟಿಯಾಗಬಹುದು. ಆದರೆ, ಸಾಂಪ್ರದಾಯಿಕ ಉದ್ಯೋಗಗಳಿಗೆ ಕುತ್ತು ತಪ್ಪದು ಎಂಬುದು ವಾಸ್ತವ.**

ಕೃತಕ ಬುದ್ಧಿಮತ್ತೆ! ಬಹುಶಃ ಇದರ ಬಗ್ಗೆ ಪ್ರಸ್ತಾಪ ಕೇಳಿಬರದ ಕ್ಷೇತ್ರವೇ ಇಲ್ಲ. ಪ್ರತಿ ವಲಯದಲ್ಲಿಯೂ ಎಐ ತಂತ್ರಜ್ಞಾನ ಅಳವಡಿಕೆ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಇದು ಇರುವ ಉದ್ಯೋಗಾವಕಾಶಗಳನ್ನೂ ಕಿತ್ತುಕೊಳ್ಳುತ್ತದೆ ಎಂಬ ಆತಂಕ ಹೆಚ್ಚಿದೆ. ವಿಶೇಷವೆಂದರೆ ಮುಂದುವರಿದ ದೇಶಗಳ ನಡುವೆ, ಈ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದರಲ್ಲಿ ಭಾರತವೇ ಮುಂಚೂಣಿಯಲ್ಲಿ ಇರುವುದು.

ಹೊಸದಿಲ್ಲಿ: ಉದ್ಯೋಗ ಮಾರುಕಟ್ಟೆಯ ಮೇಲೆ ಮಾರಕ ಪರಿಣಾಮ ಬೀರುತ್ತದೆ ಎಂಬ ಆತಂಕದ ನಡುವೆಯೂ ಎಲ್ಲ ವಲಯಗಳಲ್ಲೂ ಕೃತಕ ಬುದ್ಧಿಮತ್ತೆ (ಎಐ) ದಾಂಗುಡಿ ಇಡುತ್ತಿದೆ. ಮಾನವ ಸಂಪನ್ಮೂಲ ತುಂಬಿ ತುಳುಕುತ್ತಿರುವ ಭಾರತವೇ ಎಐ ಅಳವಡಿಕೆಯಲ್ಲಿ ಜಾಗತಿ-ಕವಾಗಿ ಮುಂಚೂಣಿಯಲ್ಲಿದೆ ಎಂದು ಬೋಸ್ಟನ್ ಕನ್ಸಲ್ಟಿಂಗ್ ಗ್ರೂಪ್ (ಬಿಸಿಜಿ) ತಿಳಿಸಿದೆ. ಭಾರತದಲ್ಲಿ ಎಐ ಅಳವಡಿಕೆ ಪ್ರಮಾಣ ಜಾಗತಿಕ ಸರಾಸರಿಗಿಂತಲೂ ಹೆಚ್ಚಿದೆ. ಜಾಗತಿ-ಕ ಪ್ರಮಾಣ ಶೇ.26ರಷ್ಟಿದ್ದರೆ, ಭಾರತದಲ್ಲಿ ಶೇ.30ರಷ್ಟಿದೆ. ಭಾರತೀಯ ಕಂಪನಿಗಳು ಹೊಸ ತಂತ್ರಜ್ಞಾನ ಅಳವಡಿಕೆಯಲ್ಲಿ ಸದಾ ಮುಂದಿರುತ್ತವೆ ಎನ್ನುವುದು ಇದರಿಂದ ಮತ್ತೊಮ್ಮೆ ಸಾಬೀತಾಗಿದೆ.

ಏಷ್ಯಾ,ಯುರೋಪ್ ಮತ್ತು ಉತ್ತರ ಅಮೆರಿಕದ 59 ದೇಶಗಳಲ್ಲಿ ಹರಡಿರುವ 20 ಕ್ಕೂ ಹೆಚ್ಚು ಕ್ಷೇತ್ರಗಳ 1,000ಕ್ಕೂ ಹೆಚ್ಚು ಚೀಫ್ ಎಕ್ಸ್‌ಪೀರಿಯನ್ಸ್ ಆಫೀಸರ್ಸ್ (ಸಿಎಕ್ಸ್‌ಒ) ಮತ್ತು ಹಿರಿಯ ಕಾರ್ಯನಿರ್ವಾಹಕರನ್ನು ಸಮೀಕ್ಷೆಗೆ ಒಳಪಡಿಸಿದಾಗ ಸಿಕ್ಕಿರುವ ಫಲಿತಾಂಶವಿದು. 'ಭಾರತದ ಎಐ ನಾಯಕರು ಸಾಂಪ್ರದಾಯಿಕ ಮತ್ತು ಡಿಜಿಟಲ್ ಸೀಮೆಗಳನ್ನು ದಾಟಿ ಪ್ರಬುದ್ಧತೆಯನ್ನು ಹೊಂದಿದ್ದಾರೆ. ಇದು ತಂತ್ರಜ್ಞಾನ ಆಧಾರಿತ ಉದ್ಯಮಗಳ ಮೌಲ್ಯವರ್ಧನೆ ಮಾಡುತ್ತದೆ. ಉತ್ಪಾದಕತೆಯನ್ನು ಮೀರಿ ಹೊಸ ವ್ಯವಹಾರ ಮಾದರಿಗಳನ್ನು ಭಾರತೀಯರು ಶೋಧಿಸುತ್ತಿದ್ದಾರೆ. ಭಾರತ ಕೇವಲ ಎಐನಲ್ಲಿ ಮಾತ್ರ ಮುಂದಿಲ್ಲ, ತಾನು ತಲುಪಿರುವ ಎತ್ತರವನ್ನು ಅಳೆಯುವ ಹೊಸ ಮಾಪನದ ಅಗತ್ಯವನ್ನೂ ಸಾರಿ ಹೇಳುತ್ತಿದೆ. ಈ ದೃಷ್ಟಿಯಲ್ಲಿ ಭಾರತ ಎಲ್ಲರಿಗಿಂತಲೂ ಮುಂದಿದೆ," ಎಂದು ಬಿಸಿಜಿಯ ತಂತ್ರಜ್ಞಾನ ಮತ್ತು ಡಿಜಿಟಲ್ ಅಡ್ವಾಂಟೇಜ್ ಪ್ರಾಕ್ಟಿ□ಸ್‌ನ ಭಾರತ ಮುಖ್ಯಸ್ಥ ಸೈಬಲ್ ಚಕ್ರವರ್ತಿ ಹೇಳಿದ್ದಾರೆ.

ಸಾಫ್ಟ್‌ವೇರ್, ಫಿನ್‌ಟೆಕ್ ಮತ್ತು ಬ್ಯಾಂಕಿಂಗ್ ವಲಯಗಳು ದೈನಂದಿನ ಕಾರ್ಯಾಚರಣೆಗಳಲ್ಲಿ ಎಐ ಆಧಾರಿತ ಅಪ್ಲಿಕೇಶನ್‌ಗಳನ್ನು ಅಳವಡಿಸಿಕೊಳ್ಳುತ್ತಿವೆ. ಜಾಗತಿಕವಾಗಿ ಕೇವಲ ಶೇ. 4ರಷ್ಟು ಕಂಪನಿಗಳು ಮಾತ್ರ ಅತ್ಯಾಧುನಿಕ ಕೃತಕಬುದ್ಧಿಮತ್ತೆಯನ್ನು ರೂಪಿಸಿವೆ. ಶೇ. 22ರಷ್ಟು ಕಂಪನಿಗಳು ಎಐ ಕಾರ್ಯತಂತ್ರವನ್ನು ಜಾರಿಗೆ ತಂದಿವೆ. ಅವುಗಳಲ್ಲಿ ಶೇ. 74ರಷ್ಟು ಎಐ ಬಳಕೆಯಿಂದ ಆಗಿರುವ ಭಾರಿ ಲಾಭವನ್ನು ತೋರಿಸಿಲ್ಲ. ಶೇ. 26ರಷ್ಟು ಕಂಪನಿಗಳು ಮಾತ್ರ ಗಣನೀಯ ಲಾಭವನ್ನು ತೋರಿಸಿವೆ. ಆದರೂ ಇಂಥ ತಂತ್ರಜ್ಞಾನದ ಪೂರ್ಣ ಬಲವನ್ನು ಅರಿಯುವುದು ಕಡು ಕಷ್ಟ ಎಂದಿದೆ.

# ಲಾರೆನ್ಸ್ ಬಿಷ್ಣೋಯಿ ಯಾರು?

## ಭಾರತದಲ್ಲಿ ಕೆಲವರಿಗೆ ಸಿಂಹ ಸ್ವಪ್ನವೇ? ಕೆನಡಾ ದೇಶವನ್ನೇ ನಡುಗಿಸಿದನಾ?

ಲಾರೆನ್ಸ್ ಬಿಷ್ಣೋಯಿ ಪರ ವಕೀಲರ ಪ್ರಕಾರ, ಬಿಷ್ಣೋಯಿ ಈಗಾಗಲೇ ಕೊಲೆ, ಸುಲಿಗೆ ಸೇರಿದಂತೆ 40ಕ್ಕೂ ಹೆಚ್ಚು ಗಂಭೀರ ಆರೋಪಗಳನ್ನು ಎದುರಿಸುತ್ತಿದ್ದಾನೆ. ಅವುಗಳಲ್ಲಿ ಹಲವಾರು ಪ್ರಕರಣಗಳ ವಿಚಾರಣೆ ಇನ್ನೂ ನಡೆಯಬೇಕಿದೆ. ಇತ್ತೀಚಿನ ಬೆಳವಣಿಗೆಯೊಂದರಲ್ಲಿ, ಪ್ರತೀಕಾರದ ಕ್ರಮ ಎನ್ನುವಂತೆ ಭಾರತ ಮತ್ತು ಕೆನಡಾಗಳು ಪರಸ್ಪರರ ಆರು ಜನ ರಾಜತಾಂತ್ರಿಕರನ್ನು ದೇಶದಿಂದ ಹೊರಹಾಕಿದವು. ಕೆನಡಾದ ವಾಂಕೋವರ್ ಬಳಿ 2023ರಲ್ಲಿ ನಡೆದ ಸಿಖ್ ಪ್ರತ್ಯೇಕತಾವಾದಿಯೊಬ್ಬನ ಹತ್ಯೆಯ ಹಿಂದೆ ಭಾರತ ಸರ್ಕಾರದ ಏಜೆಂಟರ ಪಾತ್ರವಿದೆ ಎಂದು ಕೆನಡಾ ಆರೋಪಿಸಿದ ಬಳಿಕ ಈ ಉದ್ವಿಗ್ನತೆಗಳು ಆರಂಭಗೊಂಡವು. ಈ ಪರಿಸ್ಥಿತಿ ಭಾರತ ಮತ್ತು ಕೆನಡಾ ನಡುವಿನ ಸಂಬಂಧವನ್ನು ಹಾಳುಮಾಡಿದ್ದು, ಇಂತಹ ರಾಜತಾಂತ್ರಿಕ ಕ್ರಮಗಳಿಗೆ ಹಾದಿಮಾಡಿಕೊಟ್ಟಿದೆ.

ಇತ್ತೀಚೆಗೆ ತಲೆದೋರಿದ ರಾಜತಾಂತ್ರಿಕ ಸಮಸ್ಯೆಗಳನ್ನು ಕುರಿತು ವಿಚಾರಣೆ ನಡೆಸುತ್ತಿರುವ ಕೆನಡಾದ ರಾಯಲ್ ಕೆನಡಿಯನ್ ಮೌಂಟೆಡ್ ಪೊಲೀಸ್ (ಆರ್‌ಸಿ–ಎಂಪಿ) ಇಲಾಖೆ, ಭಾರತ ಸರ್ಕಾರದ ಏಜೆಂಟರು ಸಂಘಟಿತ ಅಪರಾಧಗಳನ್ನು ನಡೆಸುತ್ತಿರುವ 'ಬಿಷ್ಣೋಯಿ ಗ್ರೂಪ್' ಎಂಬ ಒಂದು ಅಪರಾಧಿ ಗುಂಪಿನೊಡನೆ ಸಂಪರ್ಕ ಹೊಂದಿದ್ದಾರೆ ಎಂದು ಆರೋಪಿಸಿದೆ. ಭಾರತದ ಪ್ರಮುಖ ವಿಚಾರಣಾ ಸಂಸ್ಥೆಯಾದ ನ್ಯಾಷನಲ್ ಇನ್ವೆಸ್ಟಿಗೇಟಿವ್ ಏಜೆನ್ಸಿ (ಎನ್‌ಐಎ) ಈ ಅಪರಾಧಿ ಗುಂಪನ್ನು ಲಾರೆನ್ಸ್ ಬಿಷ್ಣೋಯಿ ನೇತೃತ್ವದ ಗುಂಪು ಎಂದು ಗುರುತಿಸಿದೆ. ಲಾರೆನ್ಸ್ ಬಿಷ್ಣೋಯಿ ಪರ ವಕೀಲರ ಪ್ರಕಾರ, ಬಿಷ್ಣೋಯಿ ಈಗಾಗಲೇ ಕೊಲೆ, ಸುಲಿಗೆ ಸೇರಿದಂತೆ 40ಕ್ಕೂ ಹೆಚ್ಚು ಗಂಭೀರ ಆರೋಪಗಳನ್ನು ಎದುರಿಸುತ್ತಿದ್ದಾನೆ. ಅವುಗಳಲ್ಲಿ ಹಲವಾರು ಪ್ರಕರಣಗಳ ವಿಚಾರಣೆ ಇನ್ನೂ ನಡೆಯಬೇಕಿದೆ.



ತನ್ನ ಅಧಿಕಾರಿಗಳು ಮತ್ತು ಬಿಷ್ಣೋಯಿ ಗುಂಪಿನ ನಡುವೆ ಸಂಪರ್ಕ ಇದೆ ಎಂಬ ಕೆನಡಾದ ಆರೋಪಕ್ಕೆ ಭಾರತ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಭಾರತದ ವಿದೇಶಾಂಗ ಸಚಿವಾಲಯವೂ ಸಹ ಇದಕ್ಕೆ ಯಾವುದೇ ರೀತಿಯ ಪ್ರತಿಕ್ರಿಯೆ ನೀಡಿಲ್ಲ. ಆದರೆ ಈ ಹಿಂದೆ ಕೆನಡಾದಲ್ಲಿನ ಹತ್ಯೆಯ ಹಿಂದೆ ಭಾರತದ ಕೈವಾಡವಿದೆ ಎಂಬ ಕೆನಡಾದ ಆರೋಪಗಳನ್ನು ಭಾರತ ಹಾಸ್ಯಾಸ್ಪದ ಮತ್ತು ಆಧಾರ ರಹಿತ ಆರೋಪ ಎಂದು ಕರೆದು ತಳ್ಳಿಹಾಕಿತ್ತು. ಲಾರೆನ್ಸ್ ಬಿಷ್ಣೋಯಿ ಮತ್ತು ಆತನ ಸಹಚರರ ಕುರಿತ ಒಂದಷ್ಟು ಮಾಹಿತಿ ಇಲ್ಲಿದೆ.

### ಯಾರು ಈ ಲಾರೆನ್ಸ್ ಬಿಷ್ಣೋಯಿ?

31 ವರ್ಷ ವಯಸ್ಸಿನ, ಕಾನೂನು ಪದವೀಧರ ಲಾರೆನ್ಸ್ ಬಿಷ್ಣೋಯಿ 2015ರಿಂದಲೂ ಸೆರೆಮನೆಯಲ್ಲಿದ್ದಾನೆ. ಆತನ ವಿರುದ್ಧ ಎನ್‌ಐಎ ಒಂದು ಅಂತರಾಷ್ಟ್ರೀಯ ಅಪರಾಧ ಜಾಲವನ್ನು ಕಾರ್ಯಾಚರಿಸುವ ಆರೋಪ ಹೊರಿಸಿದೆ. ಪಂಜಾಬಿನಲ್ಲಿ ಜನಿಸಿದ ಲಾರೆನ್ಸ್ ಬಿಷ್ಣೋಯಿ ಅಷ್ಟೇನೂ ಎತ್ತರವಿಲ್ಲದ, ತೆಳ್ಳಗಿನ ವ್ಯಕ್ತಿಯಾಗಿದ್ದಾನೆ. ಆತ ನ್ಯಾಯಾಲಯದಲ್ಲಿ ಹಾಜರಾಗುವ ಗಡ್ಡ ಮೀಸೆಗಳನ್ನು ಬಿಟ್ಟು ಕಾಣಿಸಿಕೊಳ್ಳುತ್ತಾನೆ. ಬಿಷ್ಣೋಯಿ ತನ್ನ ಅಪರಾಧ ಜಾಲವನ್ನು ದೇಶದ ವಿವಿಧ ರಾಜ್ಯಗಳ ಜೈಲಿನಿಂದ, ಅಷ್ಟೇ ಏಕೆ, ಕೆನಡಾದಂತಹ ವಿದೇಶಗಳಿಂದಲೂ ನಿರ್ವಹಿಸುತ್ತಾನೆ ಎಂದು ಎನ್‌ಐಎ ತಿಳಿಸಿದೆ. ಆತ ಖಲಿಸ್ತಾನಿ ಪರ ಸಂಪರ್ಕಗಳನ್ನು ಹೊಂದಿರುವ, ನೇಪಾಳ ಮತ್ತು ಇತರ ಪ್ರದೇಶಗಳ ಗುಂಪುಗಳ ಮೂಲಕ ಕಾರ್ಯಾಚರಣೆ ನಡೆಸುತ್ತಾನೆ.

ಕಳೆದ ವರ್ಷ ಖಾಸಗಿ ಸುದ್ದಿ ವಾಹಿನಿ ಒಂದಕ್ಕೆ ಸಂದರ್ಶನ ನೀಡಿದ್ದ ಲಾರೆನ್ಸ್ ಬಿಷ್ಣೋಯಿ, ತಾನು ಪ್ರತ್ಯೇಕ ಸಿಖ್ ರಾಷ್ಟ್ರ ಸ್ಥಾಪನೆಯ ಉದ್ದೇಶ ಹೊಂದಿರುವ ಖಲಿಸ್ತಾನ್ ಚಳುವಳಿಯ ವಿರುದ್ಧವಿದ್ದೇನೆ ಎಂದಿದ್ದ. ತಾನು ದೇಶದ್ರೋಹಿ ಅಲ್ಲ ಎಂದು ಲಾರೆನ್ಸ್ ಒತ್ತಿ ಹೇಳಿದ್ದ. ಆತನ ಸಂದರ್ಶನದ ವೀಡಿಯೋವನ್ನು ಈಗ ತೆಗೆದುಹಾಕಲಾಗಿದ್ದು, ಆ ಸಂದರ್ಶನವನ್ನು ಹೇಗೆ ಚಿತ್ರಿಸಿ ಬಿಡುಗಡೆಗೊಳಿಸಲಾಯಿತು ಎಂಬ ಕುರಿತು ಅಧಿಕಾರಿಗಳು ವಿಚಾರಣೆ ನಡೆಸುತ್ತಿದ್ದಾರೆ.

### ಲಾರೆನ್ಸ್ ಬಿಷ್ಣೋಯಿ ಈಗ ಎಲ್ಲಿದ್ದಾನೆ?

ಲಾರೆನ್ಸ್ ಬಿಷ್ಣೋಯಿ ಪ್ರಸ್ತುತ ಗುಜರಾತಿನ ಔದ್ಯಮಿಕ ನಗರವಾದ ಅಹಮದಾಬಾದ್‌ನ ಸಾಬರಮತಿ ಕೇಂದ್ರೀಯ ಕಾರಾಗೃಹದಲ್ಲಿದ್ದಾನೆ. ಮಾಧ್ಯಮ ವರದಿಗಳ ಪ್ರಕಾರ, ಆತನ ಸುರಕ್ಷತೆಯ ದೃಷ್ಟಿಯಿಂದ, ಮತ್ತು ಆತ ಜೈಲಿನ ನಿಯಮಾವಳಿಗಳನ್ನು ಮುರಿಯುವುದನ್ನು ತಪ್ಪಿಸುವ ಸಲುವಾಗಿ ಬಿಷ್ಣೋಯಿಯನ್ನು ಬೇರೆ ಬೇರೆ ಜೈಲುಗಳಿಗೆ ಸ್ಥಳಾಂತ–ರಿಸಲಾಗುತ್ತದೆ.

**ಲಾರೆನ್ಸ್ ಬಿಷ್ಣೋಯಿ ವಿರುದ್ಧ ಕೆನಡಾ ಮಾಡಿರುವ ಆರೋಪಗಳೇನು?:** ಕೆನಡಾ ಲಾರೆನ್ಸ್ ಬಿಷ್ಣೋಯಿ ವಿರುದ್ಧ ಯಾವುದೇ ಗುರುತರ ಆರೋಪಗಳನ್ನು ಹೊ–ರಿಸಿಲ್ಲ. ಆದರೆ, ಕೆನಡಾದಲ್ಲಿ ನೆಲೆಸಿರುವ ಖಲಿಸ್ತಾನ್ ಬೆಂಬಲಿಗರನ್ನು ಉದ್ದೇಶಪೂರ್ವಕವಾಗಿ, ವೈಯಕ್ತಿಕವಾಗಿ ಗುರಿಯಾಗಿಸಲಾಗುತ್ತಿದೆ ಎಂದು ಆರ್‌ಸಿಎಂಪಿ ಹೇಳಿದೆ. ಬಿಷ್ಣೋಯಿ ನೇತೃತ್ವದ ಅಪರಾಧಿ ಪಡೆ ಈ ಹಿಂದೆ ಇಂತಹ ಚಟುವಟಿಕೆಗಳ ಜವಾಬ್ದಾರಿ ಹೊತ್ತುಕೊಂಡಿತ್ತು ಎಂದಿರುವ ಆರ್‌ಸಿಎಂಪಿ, ಲಾರೆನ್ಸ್ ಬಿಷ್ಣೋಯಿ ಗುಂಪು ಭಾರತದ ಏಜೆಂಟರೊಡನೆ ಸಂಪರ್ಕ ಹೊಂದಿದೆ ಎಂದು ಆರೋಪಿಸಿದೆ.

### ಲಾರೆನ್ಸ್ ಬಿಷ್ಣೋಯಿ ವಿರುದ್ಧ ಎಂತಹ ಪ್ರಕರಣಗಳಿವೆ?

ಬಿಷ್ಣೋಯಿ ಮತ್ತು ಆತನ ಗುಂಪಿನ ವಿರುದ್ಧ ಕೊಲೆ, ಸುಲಿಗೆ, ಮತ್ತು ಭಯೋತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿರುವ ಆರೋಪಗಳಿವೆ. ಎನ್‌ಐಎ ಪ್ರಕಾರ, ಬಿಷ್ಣೋಯಿ ಮತ್ತು ಆತನ ಗುಂಪು ಪ್ರಮುಖ ಸಾಮಾಜಿಕ ಮತ್ತು ಧಾರ್ಮಿಕ ವ್ಯಕ್ತಿಗಳು, ಸೆಲೆಬ್ರಿಟಿಗಳು, ಹಾಡುಗಾರರು ಮತ್ತು ಉದ್ಯಮ ಮುಖಂಡರನ್ನು ಗುರಿಯಾಗಿಸಿ ದಾಳಿ ನಡೆಸುವ ಉದ್ದೇಶ ಹೊಂದಿದೆ. ಬಿಷ್ಣೋಯಿ ಗುಂಪು ಎದುರಿಸುತ್ತಿರುವ ಒಂದು ಪ್ರಮುಖ ಆರೋಪವೆಂದರೆ, ಖ್ಯಾತ ಪಂಜಾಬಿ ರ‍್ಯಾಪರ್, ಹಾಡುಗಾರ ಸಿಧು ಮೂಸೇ ವಾಲಾ ಹತ್ಯೆ. ಮಾಧ್ಯಮ ವರದಿಗಳ ಪ್ರಕಾರ, ಪೊಲೀಸರು ಈ ಪ್ರಕರಣ–ಕ್ಕೆ ಸಂಬಂಧಿಸಿದಂತೆ ಈಗಾಗಲೇ 20ಕ್ಕೂ ಹೆಚ್ಚು ಜನರನ್ನು ಬಂಧಿಸಿದ್ದು, ಲಾರೆನ್ಸ್ ಬಿಷ್ಣೋಯಿಯನ್ನು ಈ ಪ್ರಕರಣದಲ್ಲಿ ಪ್ರಮುಖ ಆರೋಪಿ ಎಂದಿದ್ದಾರೆ.

2018ರಲ್ಲಿ ಬಿಡುಗಡೆಯಾದ ವೀಡಿಯೋ ಒಂದರಲ್ಲಿ, ಲಾರೆನ್ಸ್ ಬಿಷ್ಣೋಯಿ ಖ್ಯಾತ ಬಾಲಿವುಡ್ ನಟ ಸಲ್ಮಾನ್ ಖಾನ್‌ನನ್ನು ಕೊಲ್ಲುವುದಾಗಿ ಬೆದರಿಕೆ ಒಡ್ಡಿದ್ದ. ಈ ವರ್ಷ, ಮುಂಬೈನಲ್ಲಿ ಸಲ್ಮಾನ್ ಖಾನ್ ನಿವಾಸದ ಹೊರಗಡೆ ಗುಂಡಿನ ಸದ್ದು ಕೇಳಿತ್ತು. ಆದರೆ ಈ ಘಟನೆಯ ಕುರಿತಂತೆ ಲಾರೆನ್ಸ್ ಬಿಷ್ಣೋಯಿ ಯಾವುದೇ ಸಾರ್ವಜನಿಕ ಹೇಳಿಕೆ ನೀಡಿಲ್ಲ. ಪೊಲೀಸರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಬಂದೂಕುಧಾರಿಗಳನ್ನು ವಶಕ್ಕೆ ತೆಗೆದುಕೊಂಡರು. ಅವರು ತಾವು ಬಿಷ್ಣೋಯಿ ಗುಂಪಿನ ಆದೇಶದ ಅನುಸಾರ ಈ ಕೃತ್ಯ ನಡೆಸಿರುವುದಾಗಿ ಹೇಳಿದ್ದಾರೆ ಎನ್ನಲಾಗಿದೆ.

ಶನಿವಾರ, ಅಕ್ಟೋಬರ್ 12ರಂದು, ಬಂದೂಕುಧಾರಿಗಳು ಭಾರತದ ಔದ್ಯಮಿಕ ಕೇಂದ್ರವಾದ ಮುಂಬೈ ನಗರಿಯಲ್ಲಿ ಶಾಸಕ ಬಾಬಾ ಸಿದ್ದಿಕಿಯ ಮೇಲೆ ಗುಂಡಿನ ದಾಳಿ ನಡೆಸಿ, ಅವರನ್ನು ಹತ್ಯೆಗೈದು ಅಲ್ಲಿಂದ ಪರಾ–ರಿಯಾಗಿದ್ದರು. ಬಿಷ್ಣೋಯಿ ಗುಂಪಿನ ಸದಸ್ಯ ಎಂದು ಹೇಳಿಕೊಳ್ಳುತ್ತಿದ್ದ ಓರ್ವ ವ್ಯಕ್ತಿ ಫೇಸ್‌ಬುಕ್ ಮೂಲಕ ಬಾಬಾ ಸಿದ್ದಿಕಿ ಹತ್ಯೆಯ ಜವಾಬ್ದಾರಿ ಹೊತ್ತುಕೊಂಡಿದ್ದಾನೆ. ಮಾಧ್ಯಮಗಳಿಗೆ ಹೇಳಿಕೆ ನೀಡಿರುವ ಪೊಲೀಸರು, ಈ ದಾಳಿಯ ಯೋಜನೆಯಲ್ಲಿ ಲಾರೆನ್ಸ್ ಬಿಷ್ಣೋಯಿ ಪಾಲ್ಗೊಂಡಿದ್ದಾನೆ ಎಂದಿದ್ದಾರೆ. ಆದರೆ ಅದನ್ನು ಬೆಂಬಲಿಸುವ ಯಾವುದೇ ಪೂರಕ ಸಾಕ್ಷಿಗಳನ್ನು ಅವರು ಒದಗಿಸಿಲ್ಲ.

### ಬಿಷ್ಣೋಯಿ ಸದ್ಯದ ಪರಿಸ್ಥಿತಿ ಏನು?

ಲಾರೆನ್ಸ್ ಬಿಷ್ಣೋಯಿ ಪರ ವಕೀಲ ರಾಜಾನಿ ಎಂಬಾತನ ಪ್ರಕಾರ, ಲಾರೆನ್ಸ್ 2012ರಿಂದಲೂ ಭಾರತದಾದ್ಯಂತ ಕೊಲೆ, ಸುಲಿಗೆ, ಹಾಗೂ ಭಯೋತ್ಪಾದನೆಗೆ ಸಂಬಂಧಿಸಿದಂತೆ 40ಕ್ಕೂ ಹೆಚ್ಚು ಪ್ರಕರಣಗಳನ್ನು ಎದುರಿಸುತ್ತಿದ್ದಾನೆ. ಬಿಷ್ಣೋಯಿ ಇವುಗಳಲ್ಲಿ ಬಹಳಷ್ಟು ಆರೋಪಗಳಲ್ಲಿ ಹುರುಳಿಲ್ಲ ಎಂದಿದ್ದು, ಅವುಗಳಲ್ಲಿ ಹಲವಾರು ಪ್ರಕರಣಗಳ ವಿಚಾರಣೆ ಇನ್ನೂ ಆರಂಭಗೊಂಡಿಲ್ಲ.

**–ಗೋವಿಂದರಾಜ್ ಬೂದಗುಂಪಾ**





GB NEWS ಕನ್ನಡ
SEARCHING OF TRUTH...............



# ಸಮಾಜದಲ್ಲಿ ರಾಜಕೀಯ



ರಾಜಕೀಯವೆಂಬುದು ಯಾವುದೇ ಸಮಾಜದ ಆಧಾರವಾದ ಶಕ್ತಿಯಾಗಿದೆ. ಇದು ಸಮುದಾಯದ ಎಲ್ಲಾ ತಳಹದಿಗಳಿಗೂ ಪ್ರವೇಶಿಸಿಯೇ ಇರುತ್ತದೆ. ರಾಜಕೀಯವು ಪ್ರಜಾಪ್ರಭುತ್ವವನ್ನು ಕಟ್ಟಲು, ಸಮಾಜದಲ್ಲಿ ನ್ಯಾಯದ ಸ್ಥಾಪನೆಗೆ ಮತ್ತು ಪ್ರಜಾಪ್ರಭುತ್ವದ ಪ್ರಾಮಾಣಿಕತೆ ಕಾಯ್ದುಕೊಳ್ಳಲು ಬಹುಮುಖ್ಯವಾಗಿದೆ. ಸಮಾಜದ ಸ್ವರೂಪ, ಅದರ ಬೆಳವಣಿಗೆ ಮತ್ತು ಪ್ರಜಾಪ್ರಭುತ್ವದ ಸ್ಥಾಪನೆಗೆ ರಾಜಕೀಯವು ಪ್ರಮುಖ ಪಾತ್ರವಹಿಸುತ್ತದೆ.

### ರಾಜಕೀಯದ ಅರ್ಥ

ರಾಜಕೀಯವು ಸಾಮಾನ್ಯವಾಗಿ ಅಧಿಕಾರ, ನೀತಿ, ಪ್ರಜೆಗಳ ಹಕ್ಕು-ಕವಚ, ಮತ್ತು ಆಡಳಿತ ವ್ಯವಸ್ಥೆಯೊಂದಿಗೆ ಸಂಬಂಧಿತವಾಗಿರುತ್ತದೆ. ಪಾಶ್ಚಾತ್ಯ ತತ್ವಜ್ಞ ಸೊಕ್ರಟೀಸ್, ಅರಿಸ್ಟಾಟಲ್ ಮತ್ತು ಪ್ಲೇಟೋ ಇವರು ರಾಜಕೀಯದ ಸಂಕುಲವನ್ನು ಪರಿಭಾಷಿಸಿದ್ದು, ಜನರ ಸೇವೆಗೆ ಸಮರ್ಥವಾಗಿ ಬಳಸುವ ಶಕ್ತಿಯೆಂದೂ, ಸಮತೋಲನವನ್ನು ಕಾಯ್ದುಕೊಳ್ಳುವ ಕ್ರಮವೆಂದೂ ವಿವರಿಸಿದ್ದಾರೆ. ರಾಜಕೀಯವು ಪ್ರಜಾಪ್ರಭುತ್ವದಲ್ಲಿ ಸಮಾನ ಹಕ್ಕುಗಳ ಭರವಸೆ ನೀಡುವ ಪ್ರಕ್ರಿಯೆಯಾಗಿದೆ.

### ಸಮಾಜದಲ್ಲಿ ರಾಜಕೀಯದ ಪ್ರಭಾವ

ರಾಜಕೀಯವು ಸಮಾಜದ ಎಲ್ಲ ಕ್ಷೇತ್ರಗಳಿಗೂ ವ್ಯಾಪಕವಾಗಿ ತಲುಪಿದೆ. ಶಿಕ್ಷಣ, ಆರ್ಥಿಕತೆ, ಆಧುನೀಕರಣ, ಮತ್ತು ಸಾಮಾಜಿಕ ನ್ಯಾಯದ ಸ್ವರೂಪವನ್ನು ರೂಪಿಸುವಲ್ಲಿ ಇದು ಪ್ರಮುಖ ಪಾತ್ರ ವಹಿಸುತ್ತದೆ.

**ಇದರ ಪರಿಣಾಮವಾಗಿ:**

1. ನ್ಯಾಯದ ಸ್ಥಾಪನೆ: ರಾಜಕೀಯವು ನ್ಯಾಯದ ಸೌಧವನ್ನು ನಿರ್ಮಿಸಲು ಸಹಾಯ ಮಾಡುತ್ತದೆ.
2. ಹಕ್ಕುಗಳ ರಕ್ಷಣೆ: ಪ್ರಜೆಗಳ ಮೂಲಭೂತ ಹಕ್ಕುಗಳನ್ನು ಕಾಯ್ದುಕೊಳ್ಳಲು ಮತ್ತು ಬಲಪಡಿಸಲು ರಾಜಕೀಯದ ವ್ಯವಸ್ಥೆ ಅಗತ್ಯವಾಗಿದೆ.
3. ಸಮತೋಲನದ ನಿರ್ವಹಣೆ: ಬೇರೆ ಬೇರೆ ಸಮಾಜದಲ್ಲಿ ಇರುವ ಅಸಮಾನತೆಗಳನ್ನು ತಗ್ಗಿಸಲು ಇದು ಬಲವಾಗಿ ಪ್ರಯತ್ನಿಸುತ್ತದೆ.

**ಲಾಲ್ ಬಹದ್ದೂರ್ ಶಾಸ್ತ್ರಿ: ರಾಜಕೀಯ ಮತ್ತು ಸಾಮಾಜಿಕ ಆಧಾರ**

ಲಾಲ್ ಬಹದ್ದೂರ್ ಶಾಸ್ತ್ರಿ ಭಾರತಕ್ಕೆ ಮಾತ್ರವಲ್ಲ, ಜಗತ್ತಿಗೆ ಪ್ರಜ್ಞೆಯಾದ ರಾಜಕೀಯ ನಾಯಕರಲ್ಲಿ ಒಬ್ಬರು. "ಜೈ ಜವಾನ್, ಜೈ ಕಿಸಾನ್" ಎಂಬ ಸ್ವಘೋಷಣೆ ಮೂಲಕ ಅವರು ಭಾರತೀಯ ರೈತ ಮತ್ತು ಸೈನಿಕರ ತ್ಯಾಗವನ್ನು ಗೌರವಿಸಿದರು.

**ಶಾಸ್ತ್ರಿ ಅವರ ಉದಾಹರಣೆ:**

ಶಾಸ್ತ್ರಿಯವರ ಜನಜೀವನದ ಸಾಂದರ್ಭಿಕ ಘಟನೆಯಾದ 1965ರ ಭಾರತ-ಪಾಕಿಸ್ತಾನ ಯುದ್ಧದ ಸಮಯದಲ್ಲಿ, ಆಹಾರದ ಕೊರತೆ ಭಾರತಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿತ್ತು. ಈ ಸಂದರ್ಭದಲ್ಲಿ, ಶಾಸ್ತ್ರಿಯವರು ತಮ್ಮ ರಾಜಕೀಯ ತಂತ್ರಜ್ಞಾನವನ್ನು ಬಳಸಿಕೊಂಡು, ದೇಶದಾದ್ಯಂತ "ಆಹಾರದ ಉಪವಾಸ" ಎಂಬ ಹೊಸ ಚಲನೆಗೆ ಚಾಲನೆ ನೀಡಿದರು.

**ಸಾಮಾಜಿಕ ಸಮಾನತೆ:** ಶಾಸ್ತ್ರಿಯವರು ಜನತೆಗೆ ತಮ್ಮ ಮನೆಲೂ ಒಳಗೊಂಡಂತೆ ಆಹಾರ ಉಳಿಸುವ ಅಭ್ಯಾಸವನ್ನು ಪ್ರಾರಂಭಿಸಿದರು, ಇದು ರಾಜಕೀಯದಲ್ಲಿ ಪಾರದರ್ಶಕತೆ ಮತ್ತು ಜನಪ್ರಿಯತೆಯ ಉದಾಹರಣೆಯಾಗಿದೆ. ಹಿಂಸಾತ್ಮಕ ಕೃತ್ಯಗಳ ವಿರೋಧ: ಶಾಂತಿಯುತ ಪರಿಹಾರಗಳಿಗಾಗಿ ಶಾಸ್ತ್ರಿಯವರು ಪ್ರತಿಪಾದಿಸಿದರು. ಇದು ಅವರ ರಾಜಕೀಯ ತತ್ವಕ್ಕೆ ತಾಕಾದ ಮುಖ್ಯ ಅಂಶ.

### ರಾಜಕೀಯದಲ್ಲಿ ಜನಪ್ರಭುತ್ವದ ಪಾತ್ರ

ಜನಪ್ರಭುತ್ವವು ರಾಜಕೀಯದ ಹೃದಯವಾಗಿದೆ. ಸಾರ್ವಜನಿಕರು ರಾಜಕೀಯದಲ್ಲಿ ಪಾಲ್ಗೊಳ್ಳುವುದರಿಂದ ದೇಶದ ಅಭಿವೃದ್ಧಿ ಸಾಧ್ಯವಾಗುತ್ತದೆ. ಜನಪ್ರತಿನಿಧಿಗಳು ತಮ್ಮ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಬೇಕು.

### ರಾಜಕೀಯದ ಸವಾಲುಗಳು

1. ಅಪಾರದರ್ಶಕತೆ: ಕೆಲವೊಮ್ಮೆ ರಾಜಕೀಯವು ಅಧಿಕಾರಕೇಂದ್ರೀಯವಾಗಿ ಪರಿಣಮಿಸುತ್ತದೆ.
2. ಭ್ರಷ್ಟಾಚಾರ: ಸತತ ಆರ್ಥಿಕ ಸಮಸ್ಯೆಗಳು ಮತ್ತು ಸಾಮಾಜಿಕ ಅಸಮಾನತೆ ಇದರಿಂದ ಉಂಟಾಗುತ್ತದೆ.
3. ಆಧುನಿಕ ಸಮಸ್ಯೆಗಳು: ಅಂತಾರಾಷ್ಟ್ರೀಯ ಸಂಬಂಧ, ಪರಿಸರದ ಸಂಕಷ್ಟಗಳು, ಮತ್ತು ಟೆಕ್ನಾಲಜಿಯ ದುರುಪಯೋಗದಂತಹ ಹಲವು ಸವಾಲುಗಳು ಮುಂದುವರಿದಿವೆ.



### ಸಮಾಜದಲ್ಲಿ ರಾಜಕೀಯದ ಭವಿಷ್ಯ

ರಾಜಕೀಯವು ಪ್ರಜಾಪ್ರಭುತ್ವದ ನಿಜವಾದ ಅರ್ಥವನ್ನು ಜಾಗೃತಗೊಳಿಸಲು ಮತ್ತು ಎಲ್ಲಾ ವರ್ಗಗಳಿಗೆ ಸಮಾನತೆ ಒದಗಿಸಲು ಸಬಲವಾದ ಸಾಧನವಾಗಿದೆ. ಲಾಲ್ ಬಹದ್ದೂರ್ ಶಾಸ್ತ್ರಿಯವರಂತಹ ನಾಯಕರ ಉದಾಹರಣೆಗಳು ಪ್ರೇರಣೆಯಾಗುತ್ತವೆ. ಸಮಾಜದಲ್ಲಿ ರಾಜಕೀಯವು ಸಮತೋಲನ ಮತ್ತು ನ್ಯಾಯದ ಸವರ್ಣವನ್ನು ರೂಪಿಸಲು ಹತ್ತಿರದ ದಿನಗಳಲ್ಲಿ ಇನ್ನೂ ಬಲವಾಗಬೇಕಾಗಿದೆ. ರಾಜಕೀಯವು ಸಮಾಧಾನದ ಸ್ಥಾಪನೆ, ಸಮಾಜದ ಅಭಿವೃದ್ಧಿ ಮತ್ತು ಸಮಾನತೆಯನ್ನು ಸಾಧಿಸುವ ಪ್ರಕ್ರಿಯೆ ಎಂದು ಪರಿಗಣಿಸಲ್ಪಟ್ಟರೂ, ಇದರಲ್ಲಿ ಕೆಲವು ಪ್ರಮುಖ ದುರ್ಬಲತೆಗಳು ಮತ್ತು ಕಮಿಯುಗಳು ಸಹ ಇರುವುದನ್ನು ನಿರಾಕರಿಸಲು ಸಾಧ್ಯವಿಲ್ಲ. ರಾಜಕೀಯದ ಈ ಕಮಿಯುಗಳು ಸಮಾಜದ ಮೇಲೆ ಹಾನಿಕರ ಪರಿಣಾಮ ಬೀರಬಹುದು.

1. ಭ್ರಷ್ಟಾಚಾರ **(Corruption):**
ಭ್ರಷ್ಟಾಚಾರವು ರಾಜಕೀಯದ ಪ್ರಮುಖ ದುರಂತವಾಗಿದೆ. ರಾಜಕೀಯ ಪಕ್ಷಗಳು ಮತ್ತು ನಾಯಕರ ಹಿತಾಸಕ್ತಿಯ ಆಧಾರದ ಮೇಲೆ ನಿಯಮಗಳು ಮತ್ತು ನೀತಿಗಳನ್ನು ಬದಲಾಯಿಸಲಾಗುತ್ತದೆ, ಇದರಿಂದ ಸಮಾನತೆ ಕದಡುವ ಸನ್ನಿವೇಶ ಉಂಟಾಗುತ್ತದೆ. ಅಧಿಕಾರ ದುರುಪಯೋಗ.ಸರಕಾರಿ ನಿಧಿಗಳ ದುರ್ಬಳಕೆ. ಸಾಮಾನ್ಯ ಪ್ರಜೆಗಳಿಗೆ ನ್ಯಾಯ ಸಿಗದಿರಲು ಕಾರಣವಾಗುತ್ತದೆ.

2. ಅಧಿಕಾರದ ದುರುಪಯೋಗ (Misuse of Power):
ರಾಜಕೀಯದಲ್ಲಿ ಅಧಿಕಾರವನ್ನು ತನ್ನ ಸ್ವಾರ್ಥಕ್ಕೆ ಬಳಸುವ ಅಥವಾ ವಿರುದ್ಧ ದಿಕ್ಕಿನಲ್ಲಿ ಬಳಸುವ ಶಕ್ತಿ ಗಂಭೀರ ಸಮಸ್ಯೆ ಆಗಿದೆ. ಪ್ರಜೆಗಳ ಹಕ್ಕುಗಳನ್ನು ಕಿತ್ತುಕೊಳ್ಳುವುದು. ಪ್ರಾಮಾಣಿಕತೆ ಇಲ್ಲದ ಆಡಳಿತ. ಪ್ರಜೆಗಳ ಮೇಲೆ ದಬ್ಬಾಳಿಕೆ.

3. ಪ್ರಜಾಪ್ರಭುತ್ವದ ಅಸಮತೋಲನÀ
(Imbalance in Democracy):
ರಾಜಕೀಯದಲ್ಲಿ ಅಸಮತೋಲನವು ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುತ್ತದೆ. ಇದರಲ್ಲಿ: ಕೆಲವೊಮ್ಮೆ ಪುಣೆ/ಮೆಜಾ-ರಿಟಿ ಪಕ್ಷಗಳು ಅಲ್ಪಸಂಖ್ಯಾತರಿಗೆ ನ್ಯಾಯ ಕೊಡಲು ವಿಫಲವಾಗುತ್ತವೆ. ಜನಪ್ರತಿನಿಧಿಗಳು ತಮ್ಮ ಪ್ರದೇಶದ ಜನರ ಹಿತಾಸಕ್ತಿಗಳನ್ನು ಪೂರೈಸುವುದಕ್ಕೆ ಬದಲು ತಮ್ಮ ರಾಜಕೀಯ ಭವಿಷ್ಯವನ್ನು ಕಾಯ್ದುಕೊಳ್ಳಲು ಪ್ರಯತ್ನಿಸುತ್ತಾರೆ.

4. ಜನಪ್ರತಿನಿಧಿಗಳ ನಿರ್ಲಕ್ಷ್ಯ
(Negligence of Representatives):
ಪ್ರಜೆಗಳ ಅಗತ್ಯಗಳು ಮತ್ತು ಸಮಸ್ಯೆಗಳಿಗೆ ಸ್ಪಂದಿಸದೆ, ರಾಜಕೀಯ ನಾಯಕರು ತಮ್ಮ ಪಕ್ಷದ ಪ್ರಚಾರ ಮತ್ತು ವೈಯಕ್ತಿಕ ಉನ್ನತಿಗೆ ಆದ್ಯತೆ ನೀಡುವುದು ಸಾಮಾನ್ಯವಾಗಿದೆ. ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದನೆ ಇಲ್ಲದಿರುತ್ತದೆ. ನಿಷ್ಪಕ್ಷಪಾತ ರಾಜಕೀಯ ವ್ಯವಸ್ಥೆಗೆ ಹಾನಿ.

5. ರಾಜಕೀಯದ ಕಾಪ್ರಭಾವ (Political Polarization):
ರಾಜಕೀಯವು ಸಮುದಾಯ ಮತ್ತು ಜನಸಾಮಾನ್ಯರಲ್ಲಿ ವಿಭಜನೆಯ ಮನೋಭಾವವನ್ನು ಉಂಟುಮಾಡುತ್ತದೆ. ಧಾರ್ಮಿಕ, ಭಾಷಾ, ಅಥವಾ ಜಾತಿ ಆಧಾರಿತ ರಾಜಕೀಯವು ಗಂಭೀರ ಚಿಂತೆಗಳನ್ನು ಉಂಟುಮಾಡುತ್ತದೆ. ಒಗ್ಗಟ್ಟಿನ ಬದಲಾಗಿ ಭಿನ್ನಾಭಿಪ್ರಾಯವನ್ನು ಹೆಚ್ಚಿಸುತ್ತದೆ.

6. ದುರ್ಬಲ ಆಡಳಿತ ವ್ಯವಸ್ಥೆ (Weak Governance):
ರಾಜಕೀಯದಲ್ಲಿ ನಿಷ್ಕ್ರಿಯ ನಾಯಕತ್ವ ಅಥವಾ ಅಸಮರ್ಥ ಆಡಳಿತವು ದುರ್ಬಲ ಆರ್ಥಿಕತೆ, ಬಡತನ, ಮತ್ತು ಸಾಮಾಜಿಕ ಅಸಮತೋಲನಕ್ಕೆ ಕಾರಣವಾಗುತ್ತದೆ. ಯೋಜನೆಗಳ ಸರಿಯಾದ ಅನುಷ್ಠಾನವಾಗದಿರುತ್ತದೆ. ಆಡಳಿತಾತ್ಮಕ ವಿಫಲತೆಗಳು ಹೆಚ್ಚಾಗುತ್ತವೆ.

7.ಪ್ರಚಾರದ ರಾಜಕೀಯ (Populist Politics): ನಾಯಕರು ಪ್ರಚಾರಕ್ಕಾಗಿ ಜನರ ದಯೆ ಗೆಲ್ಲುವ ಭರವಸೆಗಳನ್ನು ನೀಡುತ್ತಾರೆ, ಆದರೆ ಅವುಗಳ ಅನುಷ್ಠಾನದಲ್ಲಿ ವಿಫಲವಾಗುತ್ತಾರೆ. ಖಾಲಿ ಭರವಸೆಗಳಿಗಾಗಿ ಸಾರ್ವಜನಿಕ ಸಂಪತ್ತಿನ ದುರುಪಯೋಗ. ದೀರ್ಘಕಾಲಿಕ ಅಭಿವೃದ್ಧಿ ಯೋಜನೆಗಳಿಗೆ ಪರಿಣಾಮ.

8.ಗಲಭೆ ಮತ್ತು ಹಿಂಸಾತ್ಮಕ ರಾಜಕೀಯ
(Riots and Violence):
ರಾಜಕೀಯದ ದುರುಪಯೋಗವು ಸಮುದಾಯಗಳಲ್ಲಿ ಗಲಭೆ ಮತ್ತು ಅಶಾಂತಿಗೆ ಕಾರಣವಾಗುತ್ತದೆ. ತಾತ್ಕಾಲಿಕ ರಾಜಕೀಯ ಲಾಭಕ್ಕಾಗಿ ಜನರ ಭಾವನೆಗಳನ್ನು ಪ್ರೇರೇಪಿಸುವುದು. ರಾಜಕೀಯ ಆಧಾರದ ಮೇಲೆ ಶೋಷಣಾ ಮನೋಭಾವ.

9. ರಾಜಕೀಯದಲ್ಲಿ ನೈತಿಕತೆಯ ಕೊರತೆ (Lack of Ethics):
ಹಲವು ರಾಜಕೀಯ ನಾಯಕರು ತಮ್ಮ ವ್ಯಕ್ತಿಗತ ಹಿತಾಸಕ್ತಿಗಳನ್ನು ಪೂರ್ಣಗೊಳಿಸಲು ನೈತಿಕ ಮೌಲ್ಯಗಳನ್ನು ಉಲ್ಲಂಘಿಸುತ್ತಾರೆ. ಪ್ರಾಮಾಣಿಕತೆಯ ಕೊರತೆ. ಅನಾವಶ್ಯಕ ರಾಜಕೀಯ ಹಣಕಾಸು ವ್ಯವಹಾರಗಳು.

10. ತಾಂತ್ರಿಕತೆಯ ದುರುಪಯೋಗ
(Misuse of Technology):
ರಾಜಕೀಯದಲ್ಲಿ ತಾಂತ್ರಿಕ ಸಾಧನಗಳನ್ನು ಪ್ರಚೋದನೆ, ನಕಲಿ ಸುದ್ದಿ ಹಬ್ಬಿಸುವುದು ಮತ್ತು ಜನಸಾಮಾನ್ಯರನ್ನು ದಾರಿ ತಪ್ಪಿಸಲು ಬಳಸಲಾಗುತ್ತದೆ.

### ಸಮಾಜದಲ್ಲಿ ಈ ಸಮಸ್ಯೆಗಳ ಪರಿಣಾಮ:

1. ಅನಿಶ್ಚಿತತೆ: ಜನಸಾಮಾನ್ಯರಲ್ಲಿ ರಾಜಕೀಯ ಮತ್ತು ಆಡಳಿತದ ಮೇಲಿನ ನಂಬಿಕೆ ಕುಸಿಯುತ್ತದೆ.
2. ಸಾಮಾಜಿಕ ಅಸಮತೋಲನ: ಬಡವರು ಮತ್ತು ಶ್ರೀಮಂತರ ನಡುವಿನ ಅಂತರ ವೃದ್ಧಿಯಾಗುತ್ತದೆ.
3. ಆರ್ಥಿಕ ಹಾನಿ: ರಾಜಕೀಯ ಹಗರಣಗಳು ಮತ್ತು ಅನುತ್ತೀರ್ಣ ಯೋಜನೆಗಳು ದೇಶದ ಆರ್ಥಿಕತೆಯನ್ನು ಕುಸಿಸಬಹುದು.



### ನಿಗ್ರಹದ ಮಾರ್ಗಗಳು:

ರಾಜಕೀಯದಲ್ಲಿ ನೈತಿಕತೆಯ ಪ್ರಮಾಣ ಹೆಚ್ಚಿಸಬೇಕು.
ಭ್ರಷ್ಟಾಚಾರ ವಿರೋಧಿ ಕಾನೂನುಗಳು ಕಠಿಣವಾಗಬೇಕು.
ಪ್ರಜಾಪ್ರಭುತ್ವದಲ್ಲಿ ಎಲ್ಲ ವರ್ಗಗಳ ಪ್ರತಿನಿಧಿಯನ್ನು ಖಚಿತಪಡಿಸಬೇಕು. ಸಾರ್ವಜನಿಕ ಜಾಗೃತಿಯನ್ನು ಉಂಟುಮಾಡಬೇಕು. ರಾಜಕೀಯವು ಸಮಾಜದಲ್ಲಿ ಅತ್ಯಂತ ಮುಖ್ಯವಾದ ಪ್ರಕ್ರಿಯೆ ಆದರೆ, ಇದರ ದುರ್ಬಲತೆಗಳನ್ನು ಪರಿಹರಿಸಲು ಸೂಕ್ತ ಪ್ರಯತ್ನಗಳು ಅಗತ್ಯವಿದೆ.


-ಶಿವರಾಜ ಚಿನ್ಮಯಿ ಸೋಮನಾಳ

# ನಾನು ಗಾಂಧಿಯನ್ನು ಏಕೆ ಕೊಂದೆ

# ನಾಥೂರಾಮ್ ಗೋಡ್ಸೆ ಬರೆದ ಪತ್ರದಲ್ಲಿದೆ

# ಅಸಲೀ ಸತ್ಯ







ಸುಪ್ರೀಂ ಕೋರ್ಟ್‌ನ ಅನುಮತಿಯೊಂದಿಗೆ, ನಾಥೂರಾಂ ಗೋಡ್ಸೆ ಅವರ ಭಾಷಣವನ್ನು ಪ್ರಕಟಿಸಲಾಯಿತು - ನಾನು ಗಾಂಧಿಯನ್ನು ಏಕೆ ಕೊಂದೆ. 60 ವರ್ಷಗಳ ಕಾಲ ಅದನ್ನು ನಿಷೇಧಿಸಲಾಗಿದೆ! ನಿಮಗೆಲ್ಲ ತಿಳಿದಿರುವಂತೆ - ಜನವರಿ 30, 1948 ರಂದು ಗೋಡ್ಸೆ ಗಾಂಧೀಜಿಯನ್ನು ಗುಂಡಿಕ್ಕಿ ಕೊಂದ. ಗುಂಡಿನ ದಾಳಿಯ ಸ್ಥಳದಿಂದ ಅವರು ತಪ್ಪಿಸಿಕೊಳ್ಳಲಿಲ್ಲ! ಅವನು ಶರಣಾದನು!

ಗೋಡ್ಸೆ ಸೇರಿದಂತೆ 17 ಮಂದಿಯ ವಿರುದ್ಧ ಮೊಕದ್ದಮೆ ಹೂಡಲಾಗಿತ್ತು. ವಿಚಾರಣೆಯ ಸಮಯದಲ್ಲಿ, ನಾಥೂರಾಮ್ ಅವರು ಗಾಂಧೀಜಿಯನ್ನು ಏಕೆ ಕೊಂದರು ಎಂದು ಮಾತನಾಡಲು ಮುಖ್ಯ ನ್ಯಾಯಾಧೀಶರಿಗೆ ಮನವಿ ಮಾಡಲಾಯಿತು. ಅನುಮತಿ ನೀಡಲಾಗಿದೆ ಆದರೆ ಷರತ್ತುಗಳಿಗೆ ಒಳಪಟ್ಟಿದೆ! ಸರ್ಕಾರದ ಸೂಚನೆಯಂತೆ ನಿಮ್ಮ ಮಾತು ನ್ಯಾಯಾಲಯದ ಹೊರಗೆ ಹೋಗಬಾರದು. ನಂತರ, ಅವರ ಕಿರಿಯ ಸಹೋದರ ಗೋಪಾಲ್ ಗೋಡ್ಸೆ ಅವರ ಈ ಸ್ಥಿತಿಯ ವಿರುದ್ಧ ಸುದೀರ್ಘ ಮೊಕದ್ದಮೆಯ ನಂತರ, ಸುಮಾರು 60 ವರ್ಷಗಳ ನಂತರ, ಅವರ ಭಾಷಣವನ್ನು ಸಾರ್ವಜನಿಕವಾಗಿ ಇರಿಸಲು ಅನುಮತಿ ನೀಡಲಾಯಿತು.

**1. ನಾಥೂರಾಂ ಚಿಂತನೆ - ಗಾಂಧೀಜಿಯವರ ಅಹಿಂಸಾ ನೀತಿ ಮತ್ತು ಮುಸ್ಲಿಂ ತುಷ್ಟೀಕರಣದ ನೀತಿ ಹಿಂದೂಗಳನ್ನು ಹೇಡಿಗಳನ್ನಾಗಿ ಮಾಡುತ್ತಿದೆ. ಕಾನ್ಪುರದಲ್ಲಿ ಗಣೇಶ್ ಶಂಕರ್ ವಿದ್ಯಾರ್ಥಿಯನ್ನು ಮುಸ್ಲಿಮರು ಬರ್ಬರವಾಗಿ ಕೊಂದರು. ಮತ್ತು ಗಾಂಧೀಜಿಯವರ ಆಲೋಚನಾ ಶೈಲಿಯಿಂದ ಗಾಂಧೀಜಿ ಪ್ರಭಾವಿತರಾಗಿದ್ದರು - ಗಾಂಧೀಜಿ ಅವರ ಹತ್ಯೆಯಲ್ಲಿ ಮೌನವಾಗಿದ್ದರು!**

**2. 1919 ರ ಜಲಿಯನ್ ವಾಲಾಬಾಗ್ ಹತ್ಯಾಕಾಂಡವು ಭರದಿಂದ ಸಾಗಿತ್ತು. ಈ ಭೀಕರ ಹತ್ಯೆ ಮಾಡಿದ ಖಳನಾಯಕ ಜನರಲ್ ಡಯರ್ ವಿರುದ್ಧ ಪ್ರಕರಣ ದಾಖಲಿಸುವಂತೆ ಗಾಂಧಿಯನ್ನು ಕೇಳಲಾಯಿತು. ಆದರೆ ಗಾಂಧಿಯವರು ಸ್ಪಷ್ಟವಾಗಿ ನಿರಾಕರಿಸಿದ್ದರು!**

**3. ಖಿಲಾಫತ್ ಚಳವಳಿಯನ್ನು ಬೆಂಬಲಿಸುವ ಮೂಲಕ ಗಾಂಧಿ ಭಾರತದಲ್ಲಿ ಕೋಮುವಾದದ ಬೀಜಗಳನ್ನು ಬಿತ್ತಿದರು! ಅವರು ಕೇವಲ ಮುಸ್ಲಿಮರ ಹಿತಚಿಂತಕ ಎಂದು ಬಣ್ಣಿಸುತ್ತಿದ್ದರು. ಮೋಪ್ಲಾ ಮುಸ್ಲಿಮರು ಕೇರಳದಲ್ಲಿ 1500 ಹಿಂದೂಗಳನ್ನು ಕೊಂದು 2000 ಹಿಂದೂಗಳನ್ನು ಮತಾಂತರ ಮಾಡಿದರು! ಗಾಂಧೀಜಿ ಕೂಡ ವಿರೋಧಿಸಲಿಲ್ಲ!**

**4. ನೇತಾಜಿ ಸುಭಾಷ್ ಚಂದ್ರ ಬೋಸ್ ಅವರು ಕಾಂಗ್ರೆಸ್ನ ತ್ರಿಪುರಾ ಅಧಿವೇಶನವನ್ನು ಅಗಾಧ ಬೆಂಬಲದೊಂದಿಗೆ ಗೆದ್ದರು. ಆದರೆ ಗಾಂಧಿಯವರ ನೆಚ್ಚಿನ ಅಭ್ಯರ್ಥಿ ಸೀತಾ ರಾಮಾಯಣ! ನಂತರ ಸುಭಾಷ್ ಚಂದ್ರ ಬೋಸ್ ರಾಜೀನಾಮೆ ನೀಡಬೇಕಾಯಿತು.**

**5. ಮಾರ್ಚ್ 23, 1931 - ಭಗತ್ ಸಿಂಗ್ ಗಲ್ಲಿಗೇರಿಸಲಾಯಿತು. ಮರಣದಂಡನೆಯನ್ನು ನಿಲ್ಲಿಸುವಂತೆ ಇಡೀ ದೇಶವು ಗಾಂಧಿಯವರನ್ನು ವಿನಂತಿಸಿತು. ಭಗತ್ ಸಿಂಗ್ ನ ಚಟುವಟಿಕೆಯನ್ನು ಅನುಚಿತವೆಂದು ಪರಿಗಣಿಸಿ ಗಾಂಧಿ ಈ ವಿನಂತಿಯನ್ನು ಮಾಡಲಿಲ್ಲ!**

**6. ಗಾಂಧೀಜಿಯವರು ಕಾಶ್ಮೀರದ ರಾಜ ಹರಿ ಸಿಂಗ್ ಅವರನ್ನು ರಾಜೀನಾಮೆ ನೀಡುವಂತೆ ಕೇಳಿಕೊಂಡರು - ಏಕೆಂದರೆ ಕಾಶ್ಮೀರವು ಮುಸ್ಲಿಂ ಬಹುಸಂಖ್ಯಾತ ರಾಜ್ಯವಾಗಿತ್ತು! ಹರಿಸಿಂಹನಿಗೆ ಕಾಶಿಗೆ ಹೋಗಿ ತಪಸ್ಸು ಮಾಡಲು ಹೇಳಿದ! ಆದರೆ ಹೈದರಾಬಾದಿನ ನಿಜಾಮನ ವಿಷಯದಲ್ಲಿ ಸುಮ್ಮನಿದ್ದಾರೆ. ಗಾಂಧೀಜಿಯವರ ನೀತಿ ವಿಶೇಷವಾಗಿ ಧರ್ಮದಿಂದ ಬದಲಾಯಿತು. ನಂತರ, ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಕ್ರಿಯಾಶೀಲತೆಯಿಂದಾಗಿ, ಹೈದರಾಬಾದ್ ಅನ್ನು ಭಾರತವು ಉಳಿಸಿಕೊಂಡಿತು.**

**7. ಆ ಸಮಯದಲ್ಲಿ ಪಾಕಿಸ್ತಾನದಲ್ಲಿ ಹಿಂದೂಗಳ ಹತ್ಯೆ ನಡೆಯುತ್ತಿತ್ತು. ಹಲವಾರು ಹಿಂದೂಗಳು ತಮ್ಮ ಪ್ರಾಣ ಉಳಿಸಿಕೊಳ್ಳಲು ಭಾರತಕ್ಕೆ ವಲಸೆ ಬಂದರು. ಅವರು ದೆಹಲಿಯ ಮಸೀದಿಯಲ್ಲಿ ಆಶ್ರಯ ಪಡೆದರು. ಮುಸ್ಲಿಮರು ಅದನ್ನು ವಿರೋಧಿಸಲು ಪ್ರಾರಂಭಿಸಿದರು. ಭಯಾನಕ ಚಳಿಗಾಲದ ರಾತ್ರಿಯಲ್ಲಿ, ತಾಯಂದಿರು, ಸಹೋದರಿಯರು, ಮಕ್ಕಳು ಮತ್ತು ವೃದ್ಧರೆಲ್ಲರನ್ನು ಮಸೀದಿಯಿಂದ ಬಲವಂತವಾಗಿ ಹೊರಹಾಕಲಾಯಿತು. ಗಾಂಧಿ ಮೌನವಾದರು!**

**8. ದೇವಸ್ಥಾನದಲ್ಲಿ ಖುರಾನ್ ಓದಲು ಮತ್ತು ಪ್ರಾರ್ಥನೆ ಮಾಡಲು ಗಾಂಧಿ ವ್ಯವಸ್ಥೆ ಮಾಡಿದರು! ಬದಲಾಗಿ ಯಾವ ಮಸೀದಿಯಲ್ಲೂ ಗೀತಾ ಓದುವ ವ್ಯವಸ್ಥೆ ಮಾಡಲಾಗಲಿಲ್ಲ! ಅಸಂಖ್ಯಾತ ಹಿಂದೂಗಳು ಮತ್ತು ಬ್ರಾಹ್ಮಣರು ಇದರ ವಿರುದ್ಧ ಪ್ರತಿಭಟಿಸಿದರು - ಗಾಂಧಿ ತಲೆಕೆಡಿಸಿಕೊಳ್ಳಲಿಲ್ಲ.**

**9. ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ಲಾಹೋರ್ ಕಾಂಗ್ರೆಸ್ ಅನ್ನು ಗೆದ್ದರು, ಆದರೆ ಗಾಂಧಿಯವರು ನೆಹರುಗೆ ಹುದ್ದೆಯನ್ನು ನೀಡಬೇಕೆಂದು ಒತ್ತಾಯಿಸಿದರು. ಅವರು ತಮ್ಮ ಆಸೆಯನ್ನು ಈಡೇರಿಸುವಲ್ಲಿ ಪರಿಪೂರ್ಣರಾಗಿದ್ದರು. ಧರಣಿ, ಉಪವಾಸ, ಸಿಟ್ಟು, ಮಾತು ನಿಲ್ಲಿಸುವುದು- ಈ ತಂತ್ರಗಳ ಸಹಾಯದಿಂದ ಬ್ಲ್ಯಾಕ್ ಮೇಲ್ ಮಾಡುತ್ತಿದ್ದರು. ಅವರು ನಿರ್ಧಾರವನ್ನು ಸರಿ ಅಥವಾ ತಪ್ಪು ಎಂದು ನಿರ್ಣಯಿಸಲಿಲ್ಲ.**

**10. ಜೂನ್ 14, 1947 ರಂದು ದೆಹಲಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆ ಇತ್ತು. ಚರ್ಚೆಯ ವಿಷಯ ಭಾರತದ ವಿಭಜನೆಯಾಗಿತ್ತು. ಈ ಪ್ರಸ್ತಾವನೆಯನ್ನು ತಿರಸ್ಕರಿಸಬೇಕಿತ್ತು. ಆದರೆ ವಿಚಿತ್ರವೆಂದರೆ, ಗಾಂಧಿಯವರು ದೇಶವನ್ನು ವಿಭಜಿಸುವ ಪ್ರಸ್ತಾಪವನ್ನು ಬೆಂಬಲಿಸಿದರು. ಮೊನ್ನೆ ಹೇಳಿದ್ದು ಇದನ್ನೇ - ದೇಶವನ್ನು ಇಬ್ಭಾಗ ಮಾಡಬೇಕೆಂದರೆ ಸತ್ತ ಮೇಲೆಯೇ ಮಾಡಬೇಕು! ಕೋಟ್ಯಂತರ ಹಿಂದೂಗಳು ಸತ್ತರೂ ಮೌನ ವಹಿಸಿದ್ದಾರೆ! ಮುಸಲ್ಮಾನರಿಗೆ ಶಾಂತಿ ಕಾಪಾಡುವಂತೆ ಅವರು ಎಂದೂ ಆಜ್ಞಾಪಿಸಲಿಲ್ಲ- ಹಿಂದೂಗಳಿಗೆ ಮಾತ್ರ ಸಲಹೆಯಂತೆ!**

**11. ಗಾಂಧಿಯವರು ಸೆಕ್ಯುಲರಿಸಂನ ಸೋಗಿನಲ್ಲಿ "ಮುಸ್ಲಿಂ ಮುಖಸ್ತುತಿ"ಗೆ ಜನ್ಮ ನೀಡಿದರು. ಹಿಂದಿಯನ್ನು ರಾಜ್ಯ ಭಾಷೆಯನ್ನಾಗಿ ಮಾಡಲು ಮುಸ್ಲಿಮರು ವಿರೋಧಿಸಿದಾಗ - ಗಾಂಧಿ ಒಪ್ಪಿಕೊಂಡರು!**

**ಅವರು ಒಂದು ವಿಚಿತ್ರ ಪರಿಹಾರವನ್ನು ನೀಡಿದರು - "ಹಿಂದೂಸ್ತಾನಿ" (ಹಿಂದಿ ಮತ್ತು ಉರ್ದು ಖಿಚ್ರಿ)! ಅವರು ಬಾದಶಾ ರಾಮ್, ಬೇಗಂ ಸೀತಾ ಎಂದು ಕರೆಯಲು ಪ್ರಾರಂಭಿಸಿದರು!**

**12. ಅವರು ಕೆಲವು ಮುಸ್ಲಿಮರನ್ನು ವಿರೋಧಿಸಿ ತಲೆ ಬಾಗಿಸಿ "ವಂದೇ ಮಾತರಂ" ಅನ್ನು ರಾಷ್ಟ್ರಗೀತೆಯಾಗಲು ಬಿಡಲಿಲ್ಲ!**

**13. ಗಾಂಧೀಜಿಯವರು ಛತ್ರಪತಿ ಶಿವಾಜಿ, ಮಹಾರಾಣಾ ಪ್ರತಾಪ್, ಗುರು ಗೋಬಿಂದ್ ಸಿಂಗ್ ಅವರನ್ನು ದಾರಿತಪ್ಪಿದ ದೇಶಭಕ್ತರೆಂದು ಪದೇ ಪದೇ ಕರೆದಿದ್ದಾರೆ! ಆದರೆ ಅಲ್ಲಿ ಅವರು ಮುಹಮ್ಮದ್ ಅಲಿ ಜಿನ್ನಾರನ್ನು "ಖೈದಾ ಆಜಮ್" ಎಂದು ಕರೆಯುತ್ತಿದ್ದರು! ಎಂತಹ ವಿಚಿತ್ರ!**

**14. 1931 ರಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಸ್ವತಂತ್ರ ಭಾರತದ ರಾಷ್ಟ್ರಧ್ವಜ ಹೇಗಿರುತ್ತದೆ ಎಂಬುದನ್ನು ನಿರ್ಧರಿಸಲು ಸಮಿತಿಯನ್ನು ರಚಿಸಿತು. ಮಧ್ಯದಲ್ಲಿ ನೂಲುವ ಚಕ್ರವಿರುವ ಆಳವಾದ ಕೇಸರಿ ಬಟ್ಟೆಯ ಧ್ವಜ ಇರಬೇಕೆಂದು ಈ ಸಮಿತಿಯು ಸರ್ವಾನುಮತದಿಂದ ನಿರ್ಧರಿಸಿತು. ಆದರೆ ಗಾಂಧೀಜಿಯವರ ಒತ್ತಾಯವೇ ತಿರಂಗಾ! ಎಲ್ಲವೂ ಅವನ ಇಚ್ಛೆಯ ಮೇಲೆ ಅವಲಂಬಿತವಾಗಿದೆ!**

**15. ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಉಪಕ್ರಮದ ಮೇಲೆ ಸೋಮನಾಥ ದೇವಾಲಯವನ್ನು ಪುನರ್ನಿರ್ಮಿಸುವ ಪ್ರಸ್ತಾಪವನ್ನು ಸಂಸತ್ತಿನಲ್ಲಿ ಮಂಡಿಸಿದಾಗ, ಅವರು ಅದನ್ನು ವಿರೋಧಿಸಿದರು. ಸಚಿವ ಸಂಪುಟದಲ್ಲೂ ಇರಲಿಲ್ಲ! ಆದರೆ ವಿಚಿತ್ರವೆಂದರೆ ಅವರು ಜನವರಿ 13, 1948 ರಂದು ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸಿದರು - ದೆಹಲಿಯಲ್ಲಿ ಸರ್ಕಾರದ ವೆಚ್ಚದಲ್ಲಿ ಮಸೀದಿ ನಿರ್ಮಿಸಲು! ಯಾಕೆ ಈ ದ್ವಂದ್ವ? ಹಿಂದೂಗಳು ಭಾರತೀಯರು ಎಂದು ಅವರು ಭಾವಿಸದಿರಬಹುದು! ಸರಿ, ನೀವು ಹಿಂದೂವೇ?**

**16. ಗಾಂಧೀಜಿಯವರ ಮಧ್ಯಸ್ಥಿಕೆಯಿಂದ ನಿರ್ಧರಿಸಲಾಯಿತು - ಸ್ವಾತಂತ್ರ್ಯದ ನಂತರ, ಭಾರತವು ಪಾಕಿಸ್ತಾನಕ್ಕೆ 75 ಕೋಟಿ ರೂಪಾಯಿಗಳನ್ನು ನೀಡುತ್ತದೆ. ಆರಂಭದಲ್ಲಿ 20 ಕೋಟಿ ನೀಡಲಾಗಿತ್ತು. ಉಳಿದ 55 ಕೋಟಿ ನಂತರ ನೀಡಬೇಕಿತ್ತು. ಆದರೆ ಅಕ್ಟೋಬರ್ 22, 1947 ರಂದು ಪಾಕಿಸ್ತಾನವು ಕಾಶ್ಮೀರವನ್ನು ಆಕ್ರಮಿಸಿತು! ಪಾಕಿಸ್ತಾನದ ಈ ದ್ರೋಹಕ್ಕಾಗಿ ಕೇಂದ್ರ ಸಚಿವ ಸಂಪುಟವು ಉಳಿದ ಹಣವನ್ನು ಪಾಕಿಸ್ತಾನಕ್ಕೆ ನೀಡುವುದಿಲ್ಲ ಎಂದು ನಿರ್ಧರಿಸಿತು. ಆದರೆ ಅವನು ಕೋಲಿನೊಂದಿಗೆ ಕುಳಿತನು! ಮತ್ತೆ ಬ್ಲ್ಯಾಕ್‌ಮೇಲ್ ಶುರು ಮಾಡಿದೆ - ಮತ್ತೆ ಉಪವಾಸ ಸತ್ಯಾಗ್ರಹ. ಕೊನೆಗೆ ಉಳಿದ 55 ಕೋಟಿ ರೂಪಾಯಿಯನ್ನು ದೇಶದ್ರೋಹಿ ಪಾಕಿಸ್ತಾನಕ್ಕೆ ಕೊಡಲೇಬೇಕಾದ ಅನಿವಾರ್ಯತೆ ಸರ್ಕಾರಕ್ಕೆ ಬಂತು! ಜಿನ್ನಾ ಅವರ ಮೇಲಿನ ಪ್ರೀತಿ ಮತ್ತು ಕುರುಡು ಪಾಕಿಸ್ತಾನದ ಪ್ರೀತಿಯನ್ನು ನೋಡಿದಾಗ, ಅವರು ಪಾಕಿಸ್ತಾನದ ಪಿತಾಮಹ ಎಂದು ನಾನು ಹೇಳಬಲ್ಲೆ - ಭಾರತವಲ್ಲ. ಅವರು ಪ್ರತಿ ಕ್ಷಣವೂ ಪಾಕಿಸ್ತಾನವನ್ನು ಬೆಂಬಲಿಸಿ ಮಾತನಾಡುತ್ತಾರೆ - ಪಾಕಿಸ್ತಾನದ ಹಕ್ಕು ಎಷ್ಟೇ ಅನ್ಯಾಯವಾಗಿದ್ದರೂ ಪರವಾಗಿಲ್ಲ! ಇದು ನಾಥೂರಾಂ ಗೋಡ್ಸೆ ನ್ಯಾಯಾಲಯದಲ್ಲಿ ನೀಡಿದ ಕೆಲವು ಹೇಳಿಕೆಗಳು.**

ಅವರ ಬಗ್ಗೆ ನನಗೆ ಅಪಾರ ಗೌರವವಿದೆ. ಆದರೆ ಯಾವುದೇ ದೇಶಭಕ್ತ ದೇಶವನ್ನು ವಿಭಜಿಸಲು ಸಾಧ್ಯವಿಲ್ಲ ಮತ್ತು ಯಾವುದೇ ದೇಶಪ್ರೇಮಿ ದೇಶವನ್ನು ವಿಭಜಿಸಲು ಮತ್ತು ನಿರ್ದಿಷ್ಟ ಸಮುದಾಯದ ಪರವಾಗಿರಲು ನಾವು ಅನುಮತಿಸುವುದಿಲ್ಲ. ನಾನು ಗಾಂಧಿಯನ್ನು ಕೊಂದಿಲ್ಲ - ನಾನು ಅವರನ್ನು ಕೊಂದಿದ್ದೇನೆ - ಅವರನ್ನು ಕೊಂದಿದ್ದೇನೆ. ನನಗೆ ಗಾಂಧೀಜಿಯನ್ನು ಹತ್ಯೆ ಮಾಡದೆ ಬೇರೆ ದಾರಿ ಇರಲಿಲ್ಲ. ಅವನು ನನ್ನ ಶತ್ರು ಅಲ್ಲ - ಆದರೆ ಅವನ ನಿರ್ಧಾರಗಳು ದೇಶಕ್ಕೆ ಅಪಾಯಕಾರಿ. ಒಬ್ಬ ವ್ಯಕ್ತಿಗೆ ಬೇರೆ ದಾರಿಯಿಲ್ಲದಿದ್ದಾಗ - ಸರಿಯಾದ ಕೆಲಸವನ್ನು ಮಾಡಲು ಸರಿಯಾದ ಮಾರ್ಗವನ್ನು ತೆಗೆದುಕೊಳ್ಳಲು. ಮುಸ್ಲಿಂ ಲೀಗ್ ಮತ್ತು ಪಾಕಿಸ್ತಾನವನ್ನು ಕಟ್ಟುವಲ್ಲಿ ಗಾಂಧೀಜಿಯವರ ಬೆಂಬಲದಿಂದ ನಾನು ವಿಚಲಿತನಾಗಿದ್ದೇನೆ. ಪಾಕಿಸ್ತಾನಕ್ಕೆ 55 ಕೋಟಿ ಕೊಡಬೇಕೆಂದು ಗಾಂಧೀಜಿ ಉಪವಾಸ ಸತ್ಯಾಗ್ರಹ ಮಾಡಿದರು. ಪಾಕಿಸ್ತಾನದಲ್ಲಿ ಕಿರುಕುಳಕ್ಕಾಗಿ ಭಾರತಕ್ಕೆ ವಲಸೆ ಬಂದ ಹಿಂದೂಗಳ ಸ್ಥಿತಿ ನನ್ನನ್ನು ದಿಗ್ಭ್ರಮೆಗೊಳಿಸಿತು. ಮುಸ್ಲಿಮ್ ಲೀಗ್‌ಗೆ ತಲೆಬಾಗಲು ಗಾಂಧೀಜಿಯವರಿಗೆ ಅಖಂಡ ಹಿಂದೂ ರಾಜ್ಯ ಸಾಧ್ಯವಾಗಿರಲಿಲ್ಲ. ನನ್ನ ತಾಯಿಯು ತನ್ನ ಒಬ್ಬ ಮಗನಿಗಾಗಿ ತುಂಡುಗಳಾಗಿ ವಿಭಜಿಸುವುದನ್ನು ನೋಡುವುದು ನನಗೆ ಅಸಹನೀಯವಾಗಿತ್ತು. ನಾನು ನನ್ನದೇ ದೇಶದಲ್ಲಿ ಪರಕೀಯನಾಗಿದ್ದೆ. ಮುಸ್ಲಿಂ ಲೀಗ್ ನ ಎಲ್ಲ ಅನ್ಯಾಯಗಳಿಗೂ ಅವರು ಬದ್ಧರಾಗಿದ್ದರು. ಭಾರತಮಾತೆಯನ್ನು ವಿಘಟನೆ ಮತ್ತು ದುಃಖದಿಂದ ರಕ್ಷಿಸಲು ನಾನು ಗಾಂಧೀಜಿಯನ್ನು ಕೊಲ್ಲಬೇಕು ಎಂದು ನಿರ್ಧರಿಸಿದೆ. ಅದಕ್ಕಾಗಿಯೇ ನಾನು ಗಾಂಧಿಯನ್ನು ಕೊಂದಿದ್ದೇನೆ. ಅದಕ್ಕಾಗಿ ನಾನು ಗಲ್ಲಿಗೇರಿಸುತ್ತೇನೆ ಎಂದು ನನಗೆ ತಿಳಿದಿತ್ತು ಮತ್ತು ನಾನು ಅದಕ್ಕೆ ಸಿದ್ಧನಾಗಿದ್ದೆ. ಮತ್ತು ಇಲ್ಲಿ ಮಾತೃಭೂಮಿಯನ್ನು ರಕ್ಷಿಸುವುದು ಅಪರಾಧವಾಗಿದ್ದರೆ - ನಾನು ಮತ್ತೆ ಮತ್ತೆ ಅಂತಹ ಅಪರಾಧವನ್ನು ಮಾಡುತ್ತೇನೆ - ಪ್ರತಿ ಬಾರಿ. ಮತ್ತು ಸಿಂಧೂ ನದಿಯು ಇಡೀ ಭಾರತಕ್ಕೆ ಹರಿಯುವವರೆಗೆ - ನನ್ನ ಮೂಳೆಗಳನ್ನು ಮುಳುಗಿಸಬೇಡಿ. ನನ್ನ ಮರಣದಂಡನೆ ಸಮಯದಲ್ಲಿ, ನನ್ನ ಒಂದು ಕೈಯಲ್ಲಿ ಕೇಸರಿ ಧ್ವಜ ಮತ್ತು ಇನ್ನೊಂದು ಕೈಯಲ್ಲಿ ಇಡೀ ಭಾರತದ ನಕ್ಷೆ ಇರುತ್ತದೆ. ಗಲ್ಲುಶಿಕ್ಷೆಗೆ ಹೋಗುವ ಮುನ್ನ ಭಾರತಮಾತೆಯ ವಿಜಯವನ್ನು ಹೇಳಬಯಸುತ್ತೇನೆ.

**ಓ ಭಾರತಮಾತೆ - ನಾನು ನಿಮಗೆ ಇಷ್ಟು ಮಾತ್ರ ಸೇವೆ ಸಲ್ಲಿಸಲು ಸಾಧ್ಯವಾಗಿದ್ದಕ್ಕೆ ನನಗೆ ತುಂಬಾ ವಿಷಾದವಿದೆ..**